# ಕಂಪು

June 2025

ಸಮಗ್ರ ಸಾಹಿತ್ಯದಿಂದ ಮೆರೆವ ಸಮೃದ್ಧ ಪತ್ರಿಕೆ





**ಸಂಚಿಕೆಯ ವಿಷಯ**

## ಶಾಲೆಯ ಪುನರಾರಂಭ

ಶಾಲೆಯ ನೆನಪುಗಳು, ಲೇಖನ, ಕವನ, ಹರಟೆ, ವ್ಯಕ್ತಿ ಪರಿಚಯ....

# ಒಳಗೇನಿದೆ ?

ಸಂಚಿಕೆ 14: ಜೂನ್ 2025


**ಸಂಪಾದಕರ ಲೇಖನಿಯಿಂದ** 2

**ಅನಿಸಿಕೆಯ ಅಂಗಳ** 3

**ಶಾಲೆಯ ಪುನರಾರಂಭ**

ಹೈಯೆಸ್ಟ್ ಅನುಭವ ..... 5

ಮಾಸ್ತರರ ಮನೆ ಮತ್ತು ಹಳ್ಳಿಯ ಶಾಲೆ 15

**ಕಾವ್ಯ ಮಲ್ಲಿಗೆ**

ಬಾರೋ ಸ್ಕೂಲಿಗೆ ಹೋಗೋಣಾ ಬಾ 8

ಮುದ್ದು ಅಮ್ಮ 14

ಬದುಕೊಂದು ಕಲೆ 20

**ತಿಂಗಳ ವ್ಯಕ್ತಿ**

ಶ್ರೀಮತಿ ಹೇಮಾ ಮಳಗಿ 12

**ನಮ್ಮಲ್ಲಿನ ಸುದ್ದಿ**

ಬಸವ ಭೂಷಣ ಪ್ರಶಸ್ತಿ, 9

**ನಗುವಿನ ತೋಟ** 17

**ತಿಂಗಳ ಪ್ರತಿಭೆ**

ಕುಮಾರಿ ಧನಶ್ರೀ ಜೋಗಳೆಕರ್ 18

**ಚೆಂದದ ಚಿತ್ತಾರ** 21

**ಹರಟೆಯ ಕಟ್ಟೆ**

ಸಾಲಿ ಬಾಗಲ ತಗದರ.... 22

**ಮುಂದಿನ ಸಂಚಿಕೆಯಲ್ಲಿ** 25



ವಿನ್ಯಾಸಗಾರ, ಪ್ರಕಾಶಕ
ಹಾಗು
ಸಂಪಾದಕ:

**ಮನೋಜಕುಮಾರ ಅಣ್ಣಿಗೇರಿ**

e mail:

editor@kampu.org



https://kampu.org

facebook.com/profile.php?id=61562070031486

https://www.youtube.com/@kannada-pune

https://chat.whatspp.com/JijiKncQLl1dQ6VHxAylo

@KampuMagazine



# ಸಂಪಾದಕರ ಲೇಖನಿಯಿಂದ............



ಪ್ರಿಯ ಕನ್ನಡಿಗರೇ,

ಕಂಪು ಪತ್ರಿಕೆ ಎರಡನೆಯ ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ನಿಮ್ಮೆಲ್ಲರಿಂದ ಬಂದ ಹಾರೈಕೆ, ಮತ್ತು ಶುಭಾಶಯದ ಸಂದೇಶಗಳು, ಕವನಗಳು ನಮ್ಮ ಈ ಕಿರು ಯತ್ನ ಮುಂದುವರೆಸಲು ಹುರುದುಂಬಿಸಿದವು.

ಈ ಸಲ ಧ್ವನಿಪತ್ರಿಕೆಯ ಸಂಚಿಕೆಯನ್ನು ವಿನೂತನವಾಗಿ ಮಾಡಿ ಬೇಗನೆ ಹೊರ ತಂದೆವು. ಅದರ ಜನಪ್ರಿಯತೆ ಮತ್ತು ಸ್ವೀಕಾರತೆ ನಮಗೆ ಸಂತೋಷ ತಂದಿದೆ. ನಮ್ಮ YouTube Chennel ನಲ್ಲಿ ಕನ್ನಡ ಜನಪ್ರಿಯ ಗೀತೆಗುಚ್ಛದ ಕರಾಯೋಕೆ ತಂದೆವು. ಇನ್ನೂ ಅನೇಕ ಕೃತಿಗಳನ್ನು ತರಲು ನಿಮ್ಮೆಲ್ಲರ ಕಾಣಿಕೆ ಬೇಕು.

ಈ ಸಂಚಿಕೆಯಲ್ಲಿ ಶಾಲೆಯ ಆರಂಭದ ದಿನಗಳ ರೋಚಕ ಅನುಭವಗಳ ಲೇಖನಗಳಿವೆ. ಇವು ನಿಮ್ಮ ಶಾಲಾದಿನ, ಮೇಷ್ಟ್ರು, ಮತ್ತು ಗೆಳೆಯರ ಮರೆಯಲಾರದ ನೆನಪುಗಳನ್ನು ನಿಮ್ಮ ಕಣ್ಮುಂದೆ ತಂದರೆ ನಮ್ಮ ಪ್ರಯತ್ನ ಸಾರ್ಥಕ. ಈ ಲೇಖನಗಳು ಕೆಲ ದಶಕಗಳ ಹಿಂದಿನ ನಮ್ಮ ವಿದ್ಯಾಭ್ಯಾಸ ಪದ್ಧತಿ, ಗುರು-ಶಿಷ್ಯರ ಸಂಬಂಧ ಗಳನ್ನು ತೋರಿಸುತ್ತವೆ. ಅದೇ ರೀತಿ ಹರಟೆ, ಕವನಗಳೂ ಇದೇ ವಿಷಯ ಆಧಾರಿತವಾಗಿದ್ದು ನಮ್ಮನ್ನು ಮಕ್ಕಳ ಲೋಕಕ್ಕೆ ಕರೆದೊಯ್ಯಬಲ್ಲವು.

ಪತ್ರಿಕೆಯಲ್ಲಿ ಸಾಹಿತ್ಯ, ಸಂಸ್ಕೃತಿಯ ಇನ್ನಷ್ಟು ಪ್ರಕಾರಗಳು ಬರಲಿ. ಜಾನಪದದ ಸೊಗಡು, ಕಾವ್ಯದ ಸಿರಿ ಜೊತೆಗೆ, ಕತೆಯ ಹಂದರ ಕೂಡ ಹರಡಲಿ. ಮುಂದಿನ ಸಂಚಿಕೆಯಲ್ಲಿ ಒಂದು ಕಿರುಗತೆ ನಿಮಗಾಗಿ ತರಲಿದ್ದೇವೆ. ಕತೆ ಕಳಿಸಲು ಲೇಖಕರಿಗೆ ಮನವಿ.

ಕಂಪು ಬಳಗದಲ್ಲಿ ಬಂದ ಕವನಗಳ ಸಂಕಲನದ pdf ಪ್ರತಿಯನ್ನು ಕಂಪು ಸಮೂಹದಲ್ಲಿ ಹಂಚಿಕೊಂಡಿದ್ದೆ. ಅದನ್ನು ಇನ್ನಷ್ಟು ಪರಿಶೀಲನೆ ಮಾಡಿ, ಆಯ್ದ 365 ಕವನಗಳನ್ನು ಮುದ್ರಣ ರೂಪದಲ್ಲಿ ಪ್ರಕಾಶಿಸುತ್ತೇವೆ.

ಪತ್ರಿಕೆ ಈಗಾಗಲೇ 14 ಸಂಚಿಕೆಗಳ ಪ್ರಭುದ್ಧತೆ ಹೊಂದಿದೆ ಮತ್ತು ಅದರ ವಿಸ್ತಾರ ಹರಡಿದೆ. ಹೀಗಾಗಿ ಕಂಪು ಒಂದು ಮಾಧ್ಯಮ ಸಂಸ್ಥೆಯ ರೂಪದಲ್ಲಿ ನಿರ್ಮಾಣವಾಗಬೇಕು. ಅದರ ಪ್ರಕ್ರಿಯೆಗೆ ಚಾಲನೆ ನೀಡಲಾಗಿ . ಮುಂಬರುವ ಸಂಚಿಕೆಗಳಲ್ಲಿ ಅದರ ಬಗ್ಗೆ ಇನ್ನಷ್ಟು ಮಾಹಿತಿ ಕೊಡುವೆ.

ದೇವ ಕೃಪೆಯಿಂದಲೋ, ಅಥವಾ ಶಿಕ್ಷಕರ ಯಾದಿ ಪ್ರಕ್ರಿಯೆಯಿಂದಲೋ ಅನೇಕರ ಜನ್ಮತಿಥಿ ಜೂನ್ 1 ಆಗಿ ರುಜುವಾಗಿರುತ್ತದೆ. ಏನೇ ಕಾರಣ ಇರಲಿ, ಇಂದು ಹುಟ್ಟುಹಬ್ಬ ಆಚರಿಸುವ ಸಕಲರಿಗೂ ಹುಟ್ಟುಹಬ್ಬದ ಶುಭಾಶಯಗಳು. ತಮ್ಮ ಜೀವನ ಯಾವಾಗಲೂ ಶಾಂತಿ, ಸಮೃದ್ಧಿಯಿಂದ ತಂಪಾಗಿರಲಿ. ಹಾಗೆಯೇ ಕಂಪು ಪತ್ರಿಕೆಯ ಈ ಸಂಚಿಕೆ ಎಲ್ಲೆಡೆ ಹರಡಲಿ.

ನಿಮ್ಮಲ್ಲಿಯ ಕನ್ನಡಿಗ,

- *ಮನೋಜಕುಮಾರ ಅಣ್ಣಿಗೇರಿ*

# ಅನಿಸಿಕೆಯ ಅಂಗಳ

ವರ್ಷದ ಸಂಚಿಕೆ ಭಾಳ್ ಛೋಲೋ ಆಗ್ಯದ. ಮನೋಜ್ ಅವರ ಉತ್ಸಾಹ ಮತ್ತು ಈ ಗುಂಪಿನ ಸದಸ್ಯರ ಸಹಕಾರ ಹಿಂಗೇ ಮುಂದುವರೀಲಿ.

**ಶ್ರೀ ಪ್ರಶಾಂತ ದೀಕ್ಷಿತ**

ಪ್ರಯಾಣದಲ್ಲಿದ್ದಾಗಲೇ ಇದೀಗ ಕೈಸೇರಿದ ಹೊಸವರ್ಷದ ಮೊದಲ ಅಂಕವನ್ನು ಸಂತಸದಿಂದ ಓದುತ್ತಿದ್ದೇನೆ. ಇಂಥ ಉಚ್ಚತಮ ಸಾಹಿತ್ಯಿಕ ಕಲಾಕೃತಿಗೆ ಜನ್ಮವಿತ್ತ ಶ್ರೀ ಮನೋಜಕುಮಾರ್ ಅಣ್ಣೀಗೇರಿಯವರಿಗೂ ಅವರೊಂದಿಗೆ ಕೈಜೋಡಿಸಿದ ಉಳಿದೆಲ್ಲ ಸಹಕಾರಿಗಳಿಗೂ ಮನ:ಪೂರ್ವಕ ಅಭಿನಂದನೆ ಹಾಗೂ ಶುಭಾಶಯಗಳು. 👍

**ಶ್ರೀ ಸುನೀಲ ದೇಶಪಾಂಡೆ**

ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ಕಂಪುವಿಗೆ ಹಾರ್ದಿಕ ಶುಭಾಶಯಗಳು. ಈ ಪಯಣದ ಸಫಲತೆಗೆ, ಶ್ರಮ, ಪರಿಕಲ್ಪನೆ,ಸ್ವರೂಪ ಎಲ್ಲದರ ಹಿಂದೆ ಶ್ರೀ ಮನೋಜ್ ಸರ್ ಅವರ ಅವಿರತ ಪ್ರಯತ್ನವಿದೆ. ಅದಕ್ಕಾಗಿ ಮೊದಲು ನಿಮಗೆ ಹೃತ್ಪೂರ್ವಕ ಅಭಿನಂದನೆಗಳು. ಅಸಂಖ್ಯಾತ ಕನ್ನಡದ ಪ್ರತಿಭಾವಂತ ಪ್ರತಿಭೆಗಳನ್ನ ಬೆಳಕಿಗೆ ತರುವದಲ್ಲದೇ, ಅವಕಾಶ ನೀಡಿ ಚಿರಪರಿಚಿತರನ್ನಾಗಿ ಮಾಡಿದ್ದಾರೆ.

ಕನ್ನಡ ಸಾಹಿತ್ಯ, ಸಂಸ್ಕೃತಿಯ ಪ್ರತೀಕವಾಗಿ ಕಂಪು ಉತ್ತುಂಗದ ಶಿಖರವನ್ನೇರಲಿ, ಮನೆ-ಮನಗಳಲ್ಲಿ ಅಚ್ಚಳಿಯದ ಕುರುಹಾಗಲಿ ಎಂದು ಹಾರೈಸುವೆ. ತಮ್ಮ ಶ್ರೇಷ್ಠ ಸಾಹಿತ್ಯದ ದೇಣಿಗೆಯ ಮೂಲಕ ಕಂಪುವಿನ ಗೆಲುವಿನ ಭಾಗವಾದ ಎಲ್ಲ ಸಕ್ರಿಯ ಸದಸ್ಯರಿಗೂ ಅಭಿನಂದನೆಗಳು.

ವರುಷಗಳ ಸೇರುತ,ಹರುಷವ ಸುರಿಸುತ, ಕಂಪು ಅನೇಕ ಮೈಲಿಗಲ್ಲುಗಳೆಡೆ ಸಾಗುತಿರಲಿ.

**- ಶ್ರೀಮತಿ ರಶ್ಮಿ ಕುಲಕರ್ಣಿ)**

ಕಂಪು ಪತ್ರಿಕೆ ಇಷ್ಟು ಬೇಗ ಕನ್ನಡಿಗರನ್ನು ಆಕರ್ಷಿಸಿ ವಾರ್ಷಿಕೋತ್ಸವ ಆಚರಿಸುತ್ತಿರುವುದು ತುಂಬಾ ಸಂತೋಷ. ಮೇ ತಿಂಗಳ ವ್ಯಕ್ತಿಯನ್ನಾಗಿ ಶ್ರೀಮತಿ ಇಂದಿರಾ ಸಾಲಿಯಾನ್ ಮೇಡಮ್ ಅವರನ್ನು ಪರಿಚಯಿಸಿದ್ದು ಸಂತಸವಾಯಿತು. ಬಹುಮುಖ ಪ್ರತಿಭೆಯುಳ್ಳವರು. ವಿಶೇಷವೆಂದರೆ ವರ್ಷದಲ್ಲಿ ತಿಂಗಳ ವ್ಯಕ್ತಿ ಎಲ್ಲರನ್ನೂ ಕವಿಮನಗಳನ್ನು ಸ್ವಲ್ಪದರಲ್ಲಿ ಪರಿಚಯಿಸಿದ್ದು ಚೆನ್ನಾಗಿ ಮೂಡಿಬಂದಿದೆ. ಮುಖಪುಟವೂ ಸುಂದರವಾಗಿದೆ. ಮನೋಜ್ ಸರ್ ನಿಮ್ಮ ಶ್ರಮ ಪ್ರಯತ್ನಕ್ಕೆ ಯಶಸ್ಸು ಖಂಡಿತ ದೊರೆಯುತ್ತದೆ. ಈ ಕಂಪು ಪತ್ರಿಕೆಯನ್ನು ಎಲ್ಲರೂ ತಮ್ status ನಲ್ಲಿ ಹಾಕಿದರೆ ಸಾಕಷ್ಟು ಜನರು ಪ್ರಭಾವಿತರಾಗುತ್ತಾರೆ. ಹಾಗೂ ಸದಸ್ಯರಾಗುತ್ತಾರೆ. ತುಂಬಾ ಧನ್ಯವಾದಗಳು ಸರ್ ಹಾಗೂ ಅನಿತಾ ಮೇಡಮ್ ಅವರಿಗೂ ಧನ್ಯವಾದಗಳು. ಶಕ್ತಿಯಿಲ್ಲದೆ ಶಿವನಿಲ್ಲ ಹಾಗೆಯೇ ಅನಿತಾ ಮತ್ತು ತಾವು. ಕಂಪುವಿನ ಬೆಳವಣಿಗೆಗೆ ನಾವೆಲ್ಲ ಬಳಗದವರು ತಮ್ಮ ಹಿಂದೆ ಇದ್ದೇವೆ.

**ಶ್ರೀಮತಿ ಅನ್ನಪೂರ್ಣಾ ಸಕ್ರೋಜಿ**

*ಮೊದಲ ವರ್ಷದ ಸಂಭ್ರಮ..*
*ಹರುಷ ತಂದ ವರುಷ*
*ಮುಖಪುಟವೇ ಅದ್ಭುತ,*
*ಅಂತರಾಳ ಅದ್ವಿತೀಯ,*
*ಸಂಪಾದಕರ ಕಲ್ಪನೆ ಅತ್ಯಾದ್ಭುತ...*

ಮನೋಜ್ ಅಣ್ಣನ ಕಲ್ಪನೆಯ ಆಳ ತಿಳಿಯೋದು ಒಂದ..
ಮೀನಿನ ಜಾಡು ಹುಡುಕುವುದೂ ಒಂದ..

ಆ ಹುಡುಕಾಟದಾಗ ಎಲ್ಲೋ ಒಂದ್ಕಡೆ ನಮ್ಮನ್ನ ನಾವು ಹೂಡಿಕ್ಯಾಡೋ ಪರಿಸ್ಥಿತಿ ಬಂದ್ರೂ ಬರಬಹುದು. ಅದಕ್ಕ ಸುಮ್ನೆ ಯಾಕ್ ಬೇಕ್ರಿ ಆ ಉಸಾಬರಿ.. ತಣ್ಣಗ ಕೂತು ಪೇಪರ ಓದಿದ್ರ ಆತ್ರೆಪ...

ಒಟ್ಟಾರೆ ಹೇಳ್ಬೇಕಂದ್ರ ಈ ಸಂಚಿಕೆ ಸುಪ್ಪರೋ ಸುಪ್ಪರು..

ಕಂಪು ಪತ್ರಿಕೆಯ ಬಳಗಕ್ಕೆ ಶುಭವಾಗಲಿ 🥰 ಪ್ರಿತಿಯಿಂದ

ಶಂಕರ (**ಶ್ರೀ ಮಾಲತೇಶ ಕುಲಕರ್ಣಿ**)

ನಿಮ್ಮ ಉತ್ಸಾಹ ಕನ್ನಡದ ಕಂಪು ಪಸರಿಸುವ ಶ್ರಮಕ್ಕೆ ಅನಂತಾನಂತ ನಮನಗಳೂಡನೆ ಅಭಿನಂದನೆಗ,ಳು ಶುಭವಾಗಲಿ. ಇನ್ನೂ ಹೆಚ್ಚೆಚ್ಚು ಶೃಂಗಾರಗೊಂಡು, ಕಂಪು ವಿಶ್ವದೆಲ್ಲೆಡೆ ಸುಗಂಧ ಬೀರಲಿ ಎಂದು ನನ್ನ ಹೃನ್ಮನದ ಹಾರೈಕೆ.

**ಶ್ರೀಮತಿ ಸಾವಿತ್ರಿ ಬಿ ಗೌಡ, ಹಾಸನ**

ಚಿಮ್ಮಿತೊಂದು ವಸಂತ...
ವರುಷಗಳುರುಳಿದರು ಮಾಸದ ನೆನಪು.
ಸುಂದರ ಚಿತ್ತಾರದ ಸೊಬಗಿನ ಒನಪು
ಕನವರಿಕೆಯ ಕಡಲಿನ ಕನಸು
ನಮ್ಮೆಲ್ಲರದಾಯಿತು ನನಸು.
ವಸಂತಗಳ ನವಿರು ಸಂಭ್ರಮದಿ
ಚಿಗುರಿತೊಂದು ಚಿಲುಮೆಯ ನದಿ.
ಅಕ್ಷರಗಳ ಸಾಗರದ ಕ್ಷೀರ
ಮನೆ ಮನಗಳಲು ಸಾರ
ಹೆಜ್ಜೆ ಹೆಜ್ಜೆಗೂ ಅದರ ನವಿರತೆ
ಆದರದಿ ಬರಮಾಡುವಿಕೆಯ ಪ್ರೀತ್ಯತೆ.
ಎಲ್ಲರನೂ ಸಲಹುತ ಸಹಮತದಿ
ಮನೋಜ್ಞ ಮನೋಜನ ಮುತ್ತದ್ದಿ.
ಬೆಳೆಯಲಿ ಅಕ್ಷರ ಬಂಗಾರವಾಗಲಿ
ನಿಷ್ಪಕ್ಷಪಾತದ ಸರ್ವರ ಬೆಳಕಿನಲಿ.
ಕ್ರಮಿಸುವುದಿದೆ ಇನ್ನೂ ಬಲುದೂರ.
ಕ್ರಮಗಳು ಸರಿಯಿರಲಿ ನಿರ್ವಿಹಾರ.
ನಮ್ಮೊಲುಮೆ ಕಲರವದ ಕಂಪು
ಎಲ್ಲೆಡೆಯೂ ಹಬ್ಬಲಿ ಸವಿಯ ಇಂಪು.

....ಶುಭಾಶಯಗಳೊಂದಿಗೆ... 🙏

**ಶ್ರೀ ಗಂಗಾಧರ ಬೆನ್ನೂರ**

ನನಗೆ ಈ ಪತ್ರಿಕೆಯಲ್ಲಿ ಇಷ್ಟವಾದ ಅಂಶಗಳು:

ಸರಳ ಕನ್ನಡ ಭಾಷೆ, ತಪ್ಪಿಲ್ಲದ ಕನ್ನಡ, ಉತ್ತಮ ಮುಖಪುಟ/ ಚಿತ್ರಗಳು, ಉತ್ತಮ ಸಂಪಾದಕೀಯ, ಮೌಲ್ಯವುಳ್ಳ ಲೇಖನಗಳು, ಕವಿತೆಗಳು, ನಗೆ ಹೊನಲು

ಇನ್ನು ಮುಂದಿನ ಸಂಚಿಕೆಗಳು ಈ ಕೆಳಗಿನವುಗಳನ್ನು ಹೊಂದಿರಲಿ:

ಪದಬಂಧ, ತಿಳಿಹಾಸ್ಯ (ನೀವು ಕೇಳಿದಿರಿ ಟೈಪ್), ಸಣ್ಣ ಕಥೆ, ವಿಸ್ಮಯ/ನಂಬಿದರೆ ನಂಬಿ ಈ ರೀತಿಯ ಅರ್ಧ ಪೇಜ್ ವಿಷಯ. ಮುಂದಿನ ತಿಂಗಳ ಸಾಹಿತ್ಯ/ಕವನ ಕಾರ್ಯಕ್ರಮಗಳ ವಿವರ


**ಶ್ರೀ ಎ. ಹರೀಶ ಡೋಂಗ್ರೆ, ಬೆಂಗಳೂರು**

ನಮಗೆ ಒಂದು ವರ್ಷ ಹೇಗೆ ಕಳೆಯಿತು ಎಂದು ಅಂದಾಜಿಸಲಾಗುತ್ತಿಲ್ಲ. ಆದರೆ ಅದರ ಹಿಂದಿರುವ ಸತತ ಪ್ರಯತ್ನ ಮನೋಜ್ ಸರ್ ಅವರದು ಓದುಗನು ಪ್ರತಿ ಬಾರಿ ಹೊಸದನ್ನು ಅಪೇಕ್ಷಿಸುತ್ತಾನೆ. ಅದನ್ನರಿತ ಮನೋಜ್ ಸರ್ ಅವರು ಪ್ರತಿ ಬಾರಿ ಹೊಸ ಆಲೋಚನೆಗಳೊಂದಿಗೆ ಸಂಚಿಕೆಯನ್ನು ಬಿಡುಗಡೆ ಮಾಡುತ್ತಾರೆ. ತನ್ನ ಕಂಪನ್ನು ಸೂಸುತ್ತಾ ಎಲ್ಲರನ್ನೂ ಆಕರ್ಷಿಸಲಿ ಉತ್ತುಂಗಕೇರಲಿ ಎಂದು ಆಶಿಸುತ್ತಾ ಇನ್ನೊಮ್ಮೆ

**ಶ್ರೀಮತಿ ಆರತಿ ಎನ್ ರಾವ್**

# ಲೋವರೆ..ಹೈಯರೆ.. ಅಲ್ಲ, ಹೈಯೆಷ್ಟೆ ಅನುಭವ .....

-ಅನಸೂಯ ಸಿದ್ದರಾಮ




ಆವಾಗ.., ನಮ್ ಸಾಲೀ ಚಿತ್ರಾನ ss ಬ್ಯಾರೇ ಇತ್ತ ಬಿಡ್ರಿ, ಒಂದಿಷ್ಟ ವಿಚಿತ್ರಾನೂ ಅನಸ್ತಿತ್ತು ನಮ್ಮ ಹಸಿಬಿಸಿ ವಯಸ್ಸೆ. ಏಳ್ನೆತ್ತೇ ಮುಗಿಸಿ ಎಂಟ್ನೆತ್ತೇಕ (ಲೋವರ್ ಏಟ್ತ್) ಹೈಸ್ಕೂಲ್ಗೆ ಕಾಲಿಟ್ಟ ಆ ಮೊದಲ್ನೇ ದಿನಾ! ಏನ ಹೇಳ್ಲೀ.. ಹ್ಯಾಂಗ ಹೇಳ್ಲೀ ಆ ಅನುಭವಾನ! ಇರೂತನಾ ಮರೀಲಾರದ್ದು! ಹೊರೂತನಾ ಹೊತ್ತು ಹೆಗಲ ಜಗ್ಗೀನೂ ಹೊರಿ ಇಳಸಲಾರದಂತಾದ್ದು!

ಒಂದರಿಂದ ಏಳರವರೆಗೆ ನೂರಕ್ನೂರರಷ್ಟು ಪಕ್ಕಾ ಕನ್ನಡ ಸಾಲಿ ನಮ್ದು. ಐದನೇ ವರ್ಗಕ್ಕೆ ಹಿಂದೀ, ಇಂಗ್ಲೀಷ್ ವಿಷಯಗಳು ಪಠ್ಯಕ್ರಮಕ್ಕೆ ಕಡ್ಡಾಯವಾಗಿ ಸೇರಿದ್ದರೂ, ನಮ್ಮ ಶಾಲೆಯ ಯಾವ ಅಕ್ಕೋರೂ ಈ ವಿಷಯಗಳ ಬಗ್ಗೆ ಆಸಕ್ತಿ ತಾಳಿರಲಿಲ್ಲವೆಂದೇ ನಮಗೆ ಆ ಪರಿ ಕುತೂಹಲವಿತ್ತೋ ಕಾಣೆ. ಇವೆರಡೂ ವಿಷಯ ಬೋಧನೆಗೆ ಇಬ್ಬರು ಶಿಕ್ಷಕಿಯರು ಇದ್ದರು ಕೂಡ. ದಿನದ ಪಾಠಗಳ ದಿನಚರಿಯಲ್ಲಿ ಈ ವಿಷಯಗಳೂ ಇದ್ದವು. ಅವರಿಗೆಂಥ ಒತ್ತಡವಿತ್ತೋ ಗೊತ್ತಿಲ್ಲ.

ಆದರೆ..., ಇಡೀ ವರ್ಗದ ಹಿಡಿತ ಕ್ಲಾಸ್ ಟೀಚರ್ (ನಮ್ಮ ಖಡಕ್ ಅಕ್ಕೋರ) ಕೈಯಲ್ಲಿತ್ತು! ಇವರು 'ಹೂಂ' ಅಂದರಷ್ಟೇ ಅವರು ನಮ್ಮ ವರ್ಗ ಪ್ರವೇಶಿಸಬಹುದಿತ್ತು! 'ಊಹೂಂ' ಅಂದ್ರೆ, ಇಲ್ಲ ಅಷ್ಟೇ! ಮನೆಯಲ್ಲಿ ಯಾರೋ ಅರೆಬರೆ ತಿಳಿದವರ ಹತ್ತಿರ, ಪರೀಕ್ಷೆ ಪಾಸು ಮಾಡುವಮಟ್ಟಿಗೆ ಹೇಳಿಸಿಕೊಳ್ಳುವ ಅನಿವಾರ್ಯ ಸ್ಥಿತಿ ನಮ್ಮದು! ನನಗೋ, ಅವರು ಬರಲಿ.., ಹಿಂದೀ, ಇಂಗ್ಲೀಷ್ ಕಲಿಸಲಿ, ಎಂಬ ತೀರದ ಆಸೆ. ಮುಂದಿನ ಪೋಣಾತಾಸಿನ ಅವಧಿ, ಈ ಹೊಸ ವಿಷಯವಾಗಿದ್ದಾಗ, ನಮ್ಮ ಅಕ್ಕೋರ ಕಣ್ತಪ್ಪಿಸಿ, ಚನ್ನಾಗಿ ಬೋರ್ಡ್ ಒರೆಸಿ, Sub- ENGLISH,

ಎಂದು ಅಚ್ಚುಕಟ್ಟಾಗಿ ಬರೆದುಬಿಟ್ಟಿರುತ್ತಿದ್ದೆ! ಇವೆರಡು ವಿಷಯ ಬಿಟ್ಟು ಮಿಕ್ಕೆಲ್ಲವನ್ನು ಈ ಒಬ್ಬರೇ ಅಕ್ಕೋರೇ ಹೇಳುತ್ತಿದ್ದರು. ಊಹೂಂ.. ಕೊರೆಯುತ್ತಿದ್ದರು! ಒಳಗೆ ಬಂದವರು ಬೋರ್ಡ್ ಕಡೆಗೆ ನೋಡುತ್ತಲೇ ಕೆರಳಿ ಕೆಂಡವಾಗಿ; "ಯಾವಾಕ್ಯಕಿ ಇದನ ಬರದಾಕಿ ?" ಎಂದು ಅರಚಿದಾಗ, ಅಳುಕುತ್ತ ಎದ್ದ ನನ್ನ ಕೈಗೇ ಡಸ್ಟರ್ ಕುಟ್ಟಿ, "ಹಸಽಽನಂಗೆ ಒರಸು" ಅಂತಿದ್ದರು ಒರಟಾಗಿ. ಅರೆ...! ಗುರುಸೇವೆಯ ಮೇಲಾಟಕ್ಕೆ ಬಿದ್ದಂತೆ, ಮಧ್ಯಾನ್ನದ ಎರಡರ ಸೂಟಿಯಲ್ಲಿ ದುರ್ಗಾ ಭವನದಿಂದ ದಿನವೂ ತಪ್ಪದೆ ತಂದುಕೊಡುವ, ಕಾಂದಾಭಜಿ, ಚಹದ ಭಿಡೆಯೂ ಇವರಿಗೆ ಯಾಕಿಲ್ಲ ?! ಎಂಬ ಉತ್ತರವಿಲ್ಲದ ಪ್ರಶ್ನೆ ಏಳುತ್ತಿತ್ತು ಪುಟ್ಟ ತಲೆಯೊಳಗೆ. ಎಲ್ಲ ಅವರ ತಲೆಯಲ್ಲಿದ್ದಂತೆಯೇ ಆಗುವಾಗ, ಶಿಷ್ಯರೆಲ್ಲ ಖಾಲೀ ತಲೆಯಲ್ಲೇ ಕೂಡಬೇಕಾದುದು ಬಹುಶಃ ಆ ಕಾಲದ ನ್ಯಾಯವೇ ಆಗಿತ್ತೆನಬಹುದು!

"ಹುಂ..... ತಗೀರಿ ನಿಮ್ನಿಮ್ಮ ಗಣೀತ ಪುಸ್ತಕಾ" ಎಂದುಬಿಟ್ಟರಾಯ್ತು.., ಕೂಡ್ಸು, ಕಳಿ, ಗುಣಾಕಾರ, ಭಾಗಾಕಾರ, ಅಂತ ನಮ್ಮ ಮೈಮನಸಿನ ಆಕಾರ ಕಳೆದು, ಇಡೀ ದಿನ ಅಂಕಿ ಸಂಖ್ಯೆಯ ಗುದ್ದಾಟದೊಡನೆ, ಸರಳಬಡ್ಡಿ, ಚಕ್ರಬಡ್ಡಿಯ ಚಕ್ರವ್ಯೂಹದಲಿ ಸಿಲುಕಿ, ತಪ್ಪು ಲೆಕ್ಕ ತೋರಿಸಿ, ಬೆತ್ತದೇಟಿನ ಚುರುಗುಟ್ಟುವ ಅಂಗೈ ಉಫ್ ಉಫ್ ಎಂದು ಊದಿಕೊಂಡದ್ದು ಎಷ್ಟು ಸಲವೋ !! ಹೀಂಗ ಒಂದ್ನಮೂನಿ ಸಾಲಿ ಅಂದ್ರ ಶೂಲದಂಗ ಅನಿಸಿದವಳಿಗಲ್ಲದೆ, ವರ್ಷದ ಪರೀಕ್ಷೆಯ ಪಕ್ಕಾ ಫಲಿತಾಂಶ ಇನ್ನಾರಿಗೆ ತಿಳಿದಿದ್ದೀತು! "ಪರೀಕ್ಷಾ ಟೈಂ ಒಳಗ ಆರಾಮಿದ್ದಿಲ್ಲಾ, ಹಂಗಾತು, ಹಿಂಗಾತು, ಅನ್ನೂ ಎಲ್ಲಾ ಖಾಲೀಪುಕಟ ನೆವಾ ಅಂತ ಎಲ್ಲಾರ್ಗು ತಿಳದ ಹಕೀಕತ್ತುಽಽಬಿಡ್ರಿ, ಆದ್ರೆ, ಒಂದು ಸವಲತ್ತು ನಮಗಿತ್ತು. ಏಳನೆಯ ಈಯತ್ತೆ ದಾಟಲು ನಮಗೆ ಎರಡು ಪರೀಕ್ಷೆಗಳು. ಒಂದು ಶಾಲೆಯ ಪರೀಕ್ಷೆ (ನಮ್ಮದೇ ಶಾಲೆಯಲ್ಲಿ ನಡೆವಂಥದು) ಇನ್ನೊಂದು ಪಬ್ಲಿಕ್ ಪರೀಕ್ಷೆ. ಶಾಲೆಯ ಪರೀಕ್ಷೆ ಪಾಸಾದರೆ ಸಾಕು. ಪಬ್ಲಿಕ್ ಪರೀಕ್ಷೆ ಪಾಸಾಗಲೇಬೇಕೆಂಬ ಕಡ್ಡಾಯವಿಲ್ಲದೆ ಎಂಟನೇ ತರಗತಿಗೆ ಪ್ರವೇಶ ಪಡೆಯಬಹುದಾಗಿತ್ತು. ನಾನು, ಎಂಟನೇಯತ್ತೆ ಎಂಬ ಹೈಸ್ಕೂಲ್ ಕಟ್ಟೆ ಹತ್ತಿದ್ದು ಹೀಗೆ!!

ಅದು, ಹುಬ್ಬಳ್ಳಿಯ ಬಾಸೆಲ್ ಮಿಶನ್ ಹೈಸ್ಕೂಲ್. ಅಕ್ಕ ಆಗಲೇ ಅಲ್ಲಿ ಹೈಯರ್ ಏಯ್ಟ್ ಕ್ಲಾಸಿನಲ್ಲಿದ್ದಳು. ಹೈಸ್ಕೂಲ್ ಅಂದ್ರೆ ನಮಗಾಗ ಇಂಗ್ಲೀಷ್ ಕಾನ್ವೆಂಟ್ ಶಾಲೆಗೆ ಸಮ! ದೊಡ್ಡ ಶಾಲೆ! ದೊಡ್ಡ ಕ್ಲಾಸು! ಒಂದೊಂದು ವಿಷಯಕ್ಕೂ ಒಬ್ಬೊಬ್ರು ಟೀಚರ್ರು! ಆಹಾ.. ಇದಕಿಂತ ಇನ್ನೇನು ಬೇಕು ಭಾಗ್ಯ ನಮಗೆ! ಆದ..ರೆ.., ನನಗಂತೂ ಇದರ ಮುಂದೆಯೇ ಇತ್ತು.. ಮಹಾ ಸೌಭಾಗ್ಯ!! 'ಸೌ' ಅಂದ್ರೆ ..,' ನೂರು' ಅಂತಲೂ ಗೊತ್ತಿರಲಿಲ್ಲ ನನಗೆ!!

ಲೋವರ್ ಏಯ್ಟ್ ಕ್ಲಾಸಿಗೆ ಕಾಲಿಟ್ಟ ಆ ಮೊದಲ ದಿನ...!?! ದೊಡ್ಡ ಶಾಲಾ ಮೈದಾನದಲ್ಲಿ, ಹೊಸ ಎಳೆತದ, ಹೊಸ ಸ್ವರದ, ಹೊಸರಾಗ ಸಂಯೋಜನೆಯ ಏಸುಸ್ವಾಮಿಯ ಪ್ರಾರ್ಥನಾ ಗೀತೆ ಮುಗಿಸಿ, ನಮ್ಮ ವರ್ಗ ಹೊಕ್ಕಾಗ..., ಅಳುಕು, ಆತಂಕ, ಭಯ, ಎಲ್ಲ ಸೇರಿಕೊಂಡ ಹೇಳಲಾಗದ ಭಾವಬುತ್ತಿಯ ಭಾರ ಎಳಸು ನೆತ್ತಿಗೆ! ಸಾಲದ್ದಕ್ಕೆ ಪಬ್ಲಿಕ್ ಪರೀಕ್ಷೆಯ ನಾಪಾಸು, ಪೀಸು ಪೀಸು ಮಾಡಿದಂಥ ಭಯಂಕರ ಕೀಳರಿಮೆ!

ಸ್ಥಿತಿ-ಗತಿ ಹೀಗಿರುವಾಗಲೇ ತುಂಬು ಗಾಂಭೀರ್ಯದ ನಮ್ಮ ಕ್ಲಾಸ್ ಟೀಚರ್ ಬಂದುಬಿಟ್ಟರು. "ಗುಡ್ ಮಾರ್ನಿಂಗ್ ಟೀಚರ್.." ಕಾನ್ವೆಂಟ್ ಶಾಲೆಯಿಂದ ಬಂದ ಮಕ್ಕಳ ಸಮೂಹ ರಾಗಕ್ಕೆ ನಾವೂ ನಮ್ಮ ಪಿಸುದನಿ ಸೇರಿಸಿದ್ದೆವು. ಟೀಚರ್ ನೆಟ್ಟ ನೋಟದಲ್ಲಿ ಎಲ್ಲರನ್ನು ಒಮ್ಮೆ ದಿಟ್ಟಿಸಿ, ತಮ್ಮ ಪರಿಚಯ ಮಾಡಿಕೊಡುತ್ತ, ಎಲ್ಲರೂ ಒಬ್ಬೊಬ್ಬರಾಗಿ ಅವರವರ ಹೆಸರು ಹೇಳಲು ಕೇಳಿಕೊಂಡರು. ನನ್ನದೂ ಸರದಿ ಮುಗೀತು.

# ಲೋವರೆ..ಹೈಯರೆ.. ಅಲ್ಲ, ಹೈಯೆಸ್ಟ್ ಅನುಭವ ...





ಇಷ್ಟೇ ಆಗಿದ್ದರೆ, ಜೀವನಪರ್ಯಂತ ನೆನಪಾಗಿ ಕಾಡಬೇಕಿರಲಿಲ್ಲ ಆ ಪ್ರಸಂಗ! "ಸೆವೆಂತ್ ಪಬ್ಲಿಕ್ ಎಕ್ಸಾಂ ಪಾಸಾದವರೆಲ್ಲಾ ಎದ್ದ ನಿಂದರ್ರೀ.." ಎಂದರಲ್ಲ! ಎದೆಯ ಮೂಲೆಯಲ್ಲಿ ಸಣ್ಣಗೇ ಗುಡುಗುತ್ತಿದ್ದ ಸಿಡಿಲು ಒಮ್ಮೆಲೇ ಢಮಾರ್ ಅಂತು! ಬುದುಬುದು ಎದ್ದುನಿಂತ ಅವರಿಗೆಲ್ಲ ಎಂಥ ಹೆಮ್ಮೆ! ಏನು ಚಪ್ಪಾಳೆ! ನಿಂತವರ ನೆರಳ ಮರೆಯಾದ ನನ್ನಂತವರ ತಲೆ , ಇನ್ನೆಷ್ಟಕ್ಕೂ ಬಾಗಲಾರದು, ಎನ್ನುವ ಅಳತೆಗೆ ತಗ್ಗಿತ್ತು. ಸರಿ ಕೂಡ್ರಿ ಎಂಬಂತೆ ಸನ್ನೆ ತೋರಿದ ಟೀಚರಿಂದ "ನಿಂತವ್ರನ್ನ ಬಿಟ್ಟು ಕುಂತವ್ರು ಎದ್ನಿಲ್ರೀ." ಎಂಬ ಆದೇಶ! ಅಬ್ಬ! ಆ..ಆ.. ನಮ್ಮ ಏ..ಳು..ವಿ..ಕೆ..! ಅಡಿಯಿಂದ ಮುಡಿಯವರೆಗೆ ಉದ್ದಕ್ಕೆ ಸೀಳಿ ಹೋಳು ಮಾಡಿದಂಥ ಅವಮಾನದ ಏಳುವಿಕೆ! ನೆಲದ ಹೊರತು ಇನ್ನೇನೂ ನೋಡಲಾರೆ ಎನ್ನುತ್ತ ಕತ್ತಿನ ಸಮೇತ ಬಾಗಿದ ತಲೆ! ಅವಮಾನದ ಕೊಡ ಭರಪೂರ್ ತುಂಬಿ ತುಳುಕಿ ಧುಮ್ಮಿಕ್ಕಲಿತ್ತು ಕಣ್ಣ ಹೊಳೆ! ಟೀಚರ್ ಅಷ್ಟಕ್ಕೆ ಬಿಡಲಿಲ್ಲ.

ಅಲ್ಲಿ ನಿಂತದ್ದೇ ನಾವು ನಾಕಾರು ಬಲಿ ಕುರಿಗಳು! ಅದರಲ್ಲೇ, ಚಿಮ್ಮಟದಿಂದ ಚಿಟುಕುಮುಳ್ಳಾಡಿಸಿ ಮೀಟುವಂತೆ, "ಇದರಾಗ ' ಭಾವೀಕಟ್ಟಿ' ಯಾರು? ಎಂದರು. ಈ..ಗ, ಪ್ರಶ್ನಾರ್ಥಕದಂತೆ ಮಡಿಬಿದ್ದ ತಲೆಯಿಂದ ಕಣ್ಣುಗುಡ್ಡೆಗಳನ್ನಷ್ಟೇ ಮೇಲೆತ್ತಿದೆ. ಟೀಚರ್ ನನ್ನನ್ನೇ ಇನ್ನಷ್ಟು ಚೂಪಾಗಿ ದಿಟ್ಟಿಸುತ್ತ.., "ಏನ ss ಫೇಲಾಗಿ ಬಂದೀ ss? ಮುಂದಿನ ಕ್ಲಾಸಿನ್ಯಾಗ ನಿಮ್ಮಕ್ಕ ಎಷ್ಟ ಶಾಣ್ಯಾ ಅದಾಳ.. ಕ್ಲಾಸಿಗೆ ಫಸ್ಟ್ ಅದಾಳಾ.. ನೀ ನೋಡಿದರ ಫೇಲ ss? ಈ ಕ್ಷಣಕೆ ನಾನಿಂತ ನೆಲ ಬಿರಿದು ನುಂಗಬಾರದೇ ಎನಿಸಿತು. ನಾನ್ಯಾರಿಗೂ ಕಾಣದಂತಹ ಅದೃಶ್ಯ ಜಾದೂ ಬರುವಂತಿದ್ದರೆ.. ಹೀಗೇ ಒಂದೇ ಎರಡೇ ರೇ..ರೇ ಗಳು! ಭಯಂಕರ ಅಸಡ್ಡೆ ಅವಮಾನ ಭರಿಸಲಾಗದ ನಿರ್ವಾತವೊಂದು ಇಡಿಯಾಗಿ ಆವರಿಸಿ, ಕಣ್ಣಲ್ಲಿ ತುಳುಕಿ, ಬೆಂಚ್ ಮೇಲೆ ಟಪ್..ಟಪ್..

"ಸಾಕ ಶ್ಯಾಣ್ಯೆ ಅದೀ ಕೂಡು. ಮನಸಗೊಟ್ ಓದೂದ ಬಿಟ್ ಅಳತಾಳ. ನಿಮ್ಮಕ್ಕನ್ ನೋಡ್ಕ್ಯರ ಕಲಿ" ಪೆಟ್ಟಿನ ಮೇಲೆ ಪೆಟ್ಟು ಕೊಟ್ಟರು. ಗಂಟೆ ಹೊಡೆಯುವವರೆಗೆ ನಾನೆಲ್ಲಿದ್ದೆ, ಏನಾಯ್ತು, ಒಂದೂ ಗೊತ್ತಿಲ್ಲ! ಮುಂದೆ..?

ನಮಗೆ ಕನ್ನಡ ಮತ್ತು ಇಂಗ್ಲೀಷ್ ಹೇಳಿಕೊಡುತ್ತಿದ್ದವರು ಅವರೇ ನಮ್ಮ ಕ್ಲಾಸ್ ಟೀಚರ್! ಒಂದೊಂದೂ ತಿಂಗಳ ಟೆಸ್ಟಿನ ಉತ್ತರ ಪತ್ರಿಕೆಯನ್ನು ಕೊಡುವಾಗ, ನನ್ನನ್ನು ಕರೆದು ಬದಿಗೆ ನಿಲ್ಲಿಸಿಕೊಂಡು, ಉತ್ತರ ಪತ್ರಿಕೆ ಎತ್ತಿ ಹಿಡಿದು, "ನೋಡ್ರಿಲ್ಲೆ.., ಭಾವೀಕಟ್ಟಿ ಕನ್ನಡ ಮೀಡಿಯಂನಿಂದ ಬಂದಾಕಿ ಇಂಗ್ಲೀಷ್ ನಾಗ ಹೈಯೆಸ್ಟ್ ಮಾರ್ಕ್ಸ ತಗೊಂಡಾಳ" ಎಂದು ಇಂಗ್ಲೀಷ್ ಮೀಡಿಯಂ ನಿಂದ ಬಂದವರನ್ನುದ್ದೇಶಿಸಿ ಹೇಳುತ್ತ ಚಪ್ಪಾಳೆ ಹಾಕಿಸಿದವರು! ಮನಸಾರೆ ಮೆಚ್ಚಿ ಪ್ರೋತ್ಸಾಹಿಸಿದವರು! ಕನ್ನಡ ಸಾಹಿತ್ಯದ ಗಂಧಕ್ಕೂ ಮರುಳಾಗುವಂತೆ ಮಾಡಿದವರು! ಮೊದಲ ದಿನದಂದು, "ಫೇಲಾಗಿ ಬಂದೀಯಾ?" ಎಂದು ಜರೆದು ಎಚ್ಚರಿಸಿ ಛಲದ ಚುಚ್ಚುಮದ್ದು ನೀಡಿದವರು!! ವಾರ್ಷಿಕೋತ್ಸವದ ಸಮಯಕ್ಕೆ , ನನ್ನ ಕೈ ಬರಹದ ಕನ್ನಡ ಮ್ಯಾಗಝಿನ್ ಪ್ರದರ್ಶನಕ್ಕಿಟ್ಟವರು!

ವಿದ್ಯಾರ್ಥಿ ಜೀವನಕ್ಕೆ ಹೈಯೆಸ್ಟ್ ಅನುಭವ ನೀಡಿದ, ಹೈಯೆಸ್ಟ್ ಗುರುಮಾತೆ!!

# ಬಾರೋ ಸ್ಕೂಲಿಗೆ ಹೋಗೋಣಾ ಬಾ

ರಚನೆ: ಮನೋಜಕುಮಾರ ಅಣ್ಣಿಗೇರಿ



*(ಚಿತ್ರಗೀತೆ, ಬಾರೋ ಸಂತೀಗೆ ಹೋಗೋಣಾ ಬಾ... ಆಧಾರಿತ)*

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ

ಅಲ್ಲಿ ಗೆಳೆಯರ ಗುಂಪಲ್ಲಿ
ಹಿಂದೀನ ಬೆಂಚಲ್ಲಿ
ನಕ್ಕು ನಗೋ ನಾವೇ ಹೀರೊ

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ..

ಬಣ್ಣ ಬಣ್ಣದ ಬುಕ್ಕು ಗೊತ್ತಾ
ಗಣಿತ ವಿಜ್ಞಾನ ನಿಂಗೆ ಗೊತ್ತಾ

ಬರಿ ಅಂಗಡಿ ಲೆಕ್ಕ ಗೊತ್ತು
ಬೀಜಗಣಿತ ನುಂಗವಲ್ತು

ಆರು ವಿಷಯದ ಈ ಪಾಠ
ಹೇಗೆ ನಾವು ಮಾಡೋಣಾ..

ಹೋದ ವರ್ಷದ ಹಾಗೆನೇ
ನಾವು ಪಾಸು ಆಗೋಣಾ....

ಗ್ರಾಮರ್ ಅಂದ್ರ ನಿಂಗೆ ಗೊತ್ತಾ
ತಪ್ಪಾದ್ರ ಬೀಳತೈತಿ ಬೆತ್ತಾ

I am, You are, ಗೊತ್ತು
ಮುಂದೆ ಬಂತು ನಂಗೆ ವಿಪತ್ತು

ಬೋರ್ಡಲ್ಲಿ ಬರೆದಾ ಅಕ್ಷರಾ
ತಿಳೀತಿಲ್ಲಲೇ ದೋಸ್ತಾ...

ಕಾಪಿ ಮಾಡು ನೀ ನಂತರಾ..
ಅದು ಏನು ನಿಂಗೆ ಹೊಸ್ತಾ..

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ

ಬಾರೋ ಸ್ಕೂಲಿಗೆ ಹೋಗೋಣ ಬಾ
ಪಾಟಿ ಚೀಲಾ ತಗೊಂಡು ಬಾ

# ಬಸವ ಜಯಂತಿ ನಿಮಿತ್ತ ಬಸವ ಭೂಷಣ ಪ್ರಶಸ್ತಿ, ಪುಸ್ತಕ ಬಿಡುಗಡೆ ಕಾರ್ಯಕ್ರಮ

**- ಸುಧಾ ಪಾಟೀಲ**




## ಬಸವಣ್ಣ ಜಗತ್ತಿನ ಬಹು ದೊಡ್ಡ ದಾರ್ಶನಿಕ

ಸಮಸ್ತ ಲಿಂಗಾಯತ ವೆಲ್ಫೇರ್ ಟ್ರಸ್ಟ್ ಹಾಗು ಬಸವ ತಿಳಿವಳಿಕೆ ಮತ್ತು ಸಂಶೋಧನಾ ಕೇಂದ್ರ, ಪುಣೆಯ ವತಿಯಿಂದ ಮೇ 4 ರಂದು ರವಿವಾರ, ಪುಣೆಯ ಅಕುರ್ಡಿಯ ಗ. ದಿ. ಮಾಡಗುಳ್ಕರ ಸಭಾಭವನದಲ್ಲಿ ಬೆಳಿಗ್ಗೆ 10 ಘಂಟೆಯಿಂದ 3 ಘಂಟೆಯವರೆಗೆ ಬಸವ ಜಯಂತಿಯ ಕಾರ್ಯಕ್ರಮದ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಸಮಾಜ ಸೇವೆಗೈದ ಮಹನೀಯರಿಗೆ ಸನ್ಮಾನ, ಬಸವ ಭೂಷಣ ಪ್ರಶಸ್ತಿ, ಶರಣರ ಪುಸ್ತಕ ಬಿಡುಗಡೆ, ವಧು-ವರ ಸಮ್ಮೇಳನಗಳೆಲ್ಲವೂ ಅತ್ಯಂತ ಯಶಸ್ವಿಯಾಗಿ ನಡೆದವು.

ಕಾರ್ಯಕ್ರಮದ ಉದ್ಘಾಟನೆ ಪರಮಪೂಜ್ಯ ಶ್ರೀ ಶಾಂತಲಿಂಗ ಸ್ವಾಮೀಜಿ ತೋಂಟದಾರ್ಯ ಮಠ, ಶಿರೋಳ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು. ಶ್ರೀಗಳು ತಮ್ಮ ಆಶೀರ್ವಚನದಲ್ಲಿ ವಿಶ್ವಗುರು ಬಸವಣ್ಣನವರು ಅಮೋಘವಾದ ವಚನ ಸಾಹಿತ್ಯವನ್ನು ವಿಶ್ವಕ್ಕೆ ನೀಡಿದರು, ಆ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿದರು ಎಂದು ತಿಳಿಸಿದರು. ಶಿವಶರಣರು ದೇವರಿಗೇ ಕನ್ನಡ ಕಲಿಸಿದ ಮಹಾನ್ ದಾರ್ಶನಿಕರು. ಪುರುಷರದೇ ಮೇಲುಗೈ ಇದ್ದ ಸಮಾಜದಲ್ಲಿ, ಮಹಿಳೆಯರಿಗೆ ಸಹ ಸಮಾನತೆಯನ್ನು ನೀಡಿ, ವಚನ ಸಾಹಿತ್ಯ ರಚನೆಗೆ ಅನುವು ಮಾಡಿಕೊಟ್ಟ ಪುಣ್ಯಪುರುಷರು ಎಂದು ಒತ್ತಿ ಹೇಳಿದರು.

ಮಕ್ಕಳಿಗೆ ಲಿಂಗಧಾರಣೆ ಮಾಡಿಸಬೇಕು ಮತ್ತು ಎಲ್ಲರಿಗೂ ಬಸವತತ್ವ ಅರುಹಬೇಕು ಎನ್ನುವ ಕಿವಿಮಾತು ಹೇಳುತ್ತಾ, "ಶರಣರ ನೆನೆದರ ಸರಗಿಯ ಇಟ್ಟಂಗ" ಎನ್ನುವ ಜಾನಪದ ನುಡಿಯನ್ನು ಉಲ್ಲೇಖಿಸಿದರು. ಡಾ. ಶಶಿಕಾಂತ ಪಟ್ಟಣ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಇಡೀ ಜಗತ್ತು ಈಗ ಬಸವಣ್ಣನ ಕಡೆಗೆ ನೋಡುತ್ತಿದೆ, ಬಸವಣ್ಣನವರ ಚಿಂತನೆಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿವೆ ಎಂದು ಹೇಳಿದರು.

# ಬಸವ ಜಯಂತಿಯ ಕಾರ್ಯಕ್ರಮ



ಮೂರು ವರ್ಷದಿಂದ ಸಮಸ್ತ ಲಿಂಗಾಯತ ವೆಲ್ಫೇರ್ ಟ್ರಸ್ಟ್ ಹಾಗು ಬಸವ ತಿಳಿವಳಿಕೆ ಮತ್ತು ಸಂಶೋಧನ ಕೇಂದ್ರದಿಂದ ಈ ಕಾರ್ಯಕ್ರಮಗಳು ನಡೆಯುತ್ತಿವೆ. ಅಕ್ಕನ ಅರಿವು, ವಚನ ಅಧ್ಯಯನ ವೇದಿಕೆಯ ಮೂಲಕ ಪ್ರತಿ ಶನಿವಾರ ಮತ್ತು ರವಿವಾರ ಗೂಗಲ್ ಮೀಟ್ ನಡೆಯುತ್ತವೆ ಎನ್ನುವುದನ್ನು ಡಾ. ಶಶಿಕಾಂತ ಪಟ್ಟಣ ಅವರು ಹಂಚಿಕೊಂಡರು.

ಮುಖ್ಯ ಅತಿಥಿಗಳಾದ ಡಾ. ಸರಸ್ವತಿ ಪಾಟೀಲ ಅವರು "ಅನುಭವ ಮಂಟಪದಲ್ಲಿ ವಚನಕಾರ್ತಿಯರು" ವಿಷಯದ ಬಗೆಗೆ ಎಲ್ಲ ಶರಣೆಯರ ಉದಾಹರಣೆಯೊಂದಿಗೆ ಅತ್ಯಂತ ಪ್ರಬುದ್ಧವಾಗಿ ಮಾತನಾಡಿದರು. ಚೀಫ್ ಇಂಜಿನಿಯರ್ ಪ್ರಶಾಂತ ಆಟಿ ಅವರು, ಬಸವಣ್ಣನವರು ಸಾಂಸ್ಕೃತಿಕ ನಾಯಕ ಮತ್ತು ಅನುಭವ ಮಂಟಪದ ರೂವಾರಿ ಎಂದು ಹೆಮ್ಮೆಯಿಂದ ಹೇಳಿದರು. ಕೈಗಾರಿಕೋದ್ಯಮಿ ಮತ್ತು ಲಿಂಗಾಯತ ಸಂಘಟನೆಗಳ ಸಂಚಾಲಕರಾದ ಅಣ್ಣಾರಾಯ್ ಬಿರಾದಾರ ಅವರು ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಬಸವ ಅಧ್ಯಯನ ಪೀಠ ಸ್ಥಾಪನೆಯಾಗಬೇಕು ಎನ್ನುವ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಡಾ. ಶಶಿಕಾಂತ ಪಟ್ಟಣ ಮತ್ತು ಡಾ. ಜಯಶ್ರೀ ಪಟ್ಟಣ ಅವರು ಬರೆದ "ಮಹಾರಾಷ್ಟ್ರದ ಮಹಾ ಸಂತರು" ಪುಸ್ತಕ ಮತ್ತು ಬೆಳಗಾವಿಯ ಸುಧಾ ಪಾಟೀಲ ಅವರ "ವಚನ ದಿವ್ಯ" ಪುಸ್ತಕ ಬಿಡುಗಡೆಗೊಂಡವು. ಡಾ. ಶಶಿಕಾಂತ ಪಟ್ಟಣ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಸಂಸ್ಕೃತಿ ಒಂದಕ್ಕೊಂದು ಹೇಗೆ ಪ್ರಭಾವ ಬೀರುತ್ತವೆ ಎಂದು ಹೇಳುತ್ತಾ, "ಭಾಷೆ ಯಾವುದಾದರೇನು, ಭಾವ-ಭಕ್ತಿ ಒಂದಾಗಲಿ, ಎಲ್ಲ ಸಂಕೋಲೆಗಳನ್ನು ದಾಟಿ ಮನುಷ್ಯತ್ವವ ಸಾಧಿಸಬೇಕು" ಎಂದು ಕಿವಿಮಾತು ಹೇಳಿದರು.




ತಾವು ತಮ್ಮ ಶ್ರೀಮತಿಯವರ ಜೊತೆ ಗೂಡಿ ಮಹಾರಾಷ್ಟ್ರದ ಸಂತರ ಪುಸ್ತಕ ಹೇಗೆ ರೂಪುಗೊಂಡಿತು ಎನ್ನುವುದನ್ನು ಹಂಚಿಕೊಂಡರು. ಸುಧಾ ಪಾಟೀಲ ಅವರು ತಮ್ಮ ಪುಸ್ತಕ ದಲ್ಲಿ 101 ವಚನಗಳ ಸಂಕ್ಷಿಪ್ತ ವಚನ ವಿಶ್ಲೇಷಣೆಯನ್ನು ಡಾ.ಶಶಿಕಾಂತ ಪಟ್ಟಣ ಸರ್ ಮಾರ್ಗದರ್ಶನದಲ್ಲಿ ಬರೆದಿದ್ದೇನೆ ಎಂದು ಹೇಳುತ್ತಾ, ಬಸವ ತಿಳಿವಳಿಕೆಯ ಸಂಘಟನೆಯ ಅಡಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ನಡೆಸುವ "ಅಕ್ಕನ ಅರಿವು" ವೇದಿಕೆ ಯಾವುದೇ ಹೊಗಳಿಕೆಗೆ ಮತ್ತು ಹೋಲಿಕೆಗೆ ಮೀರಿದ ಸಂಸ್ಥೆ ಎನ್ನುವ ಅಭಿಪ್ರಾಯ ಪಟ್ಟರು. ನಂತರ ಪ್ರೊ. ಶಾರದಾ ಪಾಟೀಲ (ಮೇಟಿ) ಬಾದಾಮಿ ಮತ್ತು ಡಾ. ಲಕ್ಷ್ಮಿಕಾಂತ ದಾಮಾ, ಉಪಕುಲಪತಿಗಳು, ಪುಣ್ಯಶ್ಲೋಕ ಅಹಿಲ್ಯಾದೇವಿ ಹೋಳ್ಕರ ಯೂನಿವರ್ಸಿಟಿ, ಸೊಲ್ಲಾಪುರ ಇವರಿಗೆ "ಬಸವ ಭೂಷಣ " ಪ್ರಶಸ್ತಿ ನೀಡಿ ಸನ್ಮಾನಿಸಲಾಯ್ತು. ಸನ್ಮಾನ ಸ್ವೀಕರಿಸಿದ ಡಾ. ಲಕ್ಷ್ಮಿಕಾಂತ ದಾಮಾ ಅವರು, ಬಸವ ತಿಳಿವಳಿಕೆ ವೇದಿಕೆಯೊಂದಿಗೆ ತಮ್ಮ ವಿಶ್ವವಿದ್ಯಾಲಯದಲ್ಲಿ 1108 ಕಾರ್ಯಕ್ರಮ ಮಾಡುವ ಉದ್ದೇಶವನ್ನು ಹಂಚಿಕೊಂಡರು.

# ಬಸವ ಜಯಂತಿಯ ಕಾರ್ಯಕ್ರಮ

ಪ್ರೊ. ಶಾರದಾ ಪಾಟೀಲ ಅವರು ತಮಗೆ ಪ್ರಶಸ್ತಿ ಪ್ರದಾನಿಸಿದ್ದಕ್ಕೆ ನಮ್ರತೆಯಿಂದ ಕೃತಜ್ಞತೆ ಅರ್ಪಿಸುತ್ತಾ, ಡಾ. ಪಟ್ಟಣ ಮತ್ತು ಶ್ರೀ ಶಾಂತಲಿಂಗ ಸ್ವಾಮೀಜಿ ಅವರ ಬಗೆಗೆ ಅಭಿಮಾನದ ನುಡಿಗಳನ್ನಾಡಿದರು. ಹಿಂದಿ ಭಾಷೆಯಲ್ಲಿ ತಮ್ಮ ಅತ್ಯದ್ಭುತವಾದ ಭಾಷಣ ಶುರು ಮಾಡಿ, ವಾಜಪೇಯಿ ಅವರ ಕವನದೊಂದಿಗೆ ಮುಕ್ತಾಯ ಮಾಡಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಸಮಾಜ ಸೇವೆ ಮಾಡಿದವರಿಗೆ ಎಲ್ಲ ಕಮಿಟಿ ಸದಸ್ಯರು ಕೂಡಿಕೊಂಡು ಸನ್ಮಾನ ನಡೆಸಿಕೊಟ್ಟರು. ನಂತರ ಅನಿಕೇತ ಪಾಟೀಲ ಅವರು ಎಲ್ಲರಿಗೂ ಮನ ಮುಟ್ಟುವ ಹಾಗೆ ಬಸವ ಪೊವಡಾ ನಡೆಸಿಕೊಟ್ಟರು. ಕೊನೆಯಲ್ಲಿ ವಧು-ವರರ ಸಮಾವೇಶವನ್ನು ಪ್ರೊ. ರಾಜಶೇಖರ ನಂದರಗಿ, ಡಾ. ಶಾಂತಾ ಅರಕೇರಿ,  ಶ್ರೀ ರವಿ ಖೂಬಾ, ಅಡ್ವೋಕೇಟ್ ಮನಿಷಾ ಮಹಾಜನ ಮತ್ತು ನೀತಾ ಕಡೋಲೆ ಅವರು ನಡೆಸಿ ಕೊಟ್ಟರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬಸವ ದಳದ ಸತೀಶಕುಮಾರ ಪಾಟೀಲ, ಸಿ. ಬಿ. ಗಾಣಿಗೇರ, ಡಾ. ಉಮಾಕಾಂತ ಶೇಟ್ಕರ, ಡಾ. ಎ. ವಿ. ಅರಕೇರಿ, ಗುರುರಾಜ ಚರಂತಿಮಠ, ಬಸವರಾಜ ಕುಲ್ಲೊಳ್ಳಿ, ಸಂಜಯ ಇಂಡೆ, ಬಸವರಾಜ ಪಟ್ಟಣಶೆಟ್ಟಿ, ಬಸವರಾಜ ಆಮನೆ, ಶಿವಣ್ಣ ನರೂಣೆ, ಶ್ರೀಮತಿ ಸ್ವಾತಿ ಮಾನಾ, ಅವರು ಉಪಸ್ಥಿತರಿದ್ದರು. ಸಮಸ್ತ ಲಿಂಗಾಯತ ವೆಲ್ ಫೇರ್ ಟ್ರಸ್ಟ್ ನ ಅಧ್ಯಕ್ಷರಾದ ಡಾ. ಜಯಶ್ರೀ ಪಟ್ಟಣ ಅವರು ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಜಾಹ್ನವಿ ಮಾನಾ ಅವರು ಸುಂದರವಾಗಿ ವಚನ ಗಾಯನ ನಡೆಸಿ ಕೊಟ್ಟರು. ರವೀಂದ್ರ ಖೂಬಾ. ಮತ್ತು ಜಯಶ್ರೀ ಕೊಗನೂರ ಅವರು ಸಮರ್ಪಕವಾಗಿ ಕಾರ್ಯಕ್ರಮ ನಡೆಸಿಕೊಟ್ಟರು ಅವರು ವಂದನಾರ್ಪಣೆ ಮಾಡಿದರು. ಡಾ. ಶಶಿಕಾಂತ ಪಟ್ಟಣ ಮತ್ತು ಡಾ. ಜಯಶ್ರೀ ಪಟ್ಟಣ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಅತ್ಯಂತ ಶಿಸ್ತು ಬದ್ಧವಾಗಿ ನಡೆಯಿತು.



# ಶ್ರೀಮತಿ ಹೇಮಾ ಮಳಗಿ



**ವಿದ್ಯಾ ವಿನಯೇನ ಶೋಭತೆ**, ಎನ್ನುವಂತೆ, ಸ್ವತಃ ಜ್ಞಾನ ಭಂಡಾರವಾಗಿದ್ದರೂ ಸರಳತೆ, ಸಜ್ಜನಿಕೆಯ ಮೂರ್ತ ಸ್ವರೂಪ ಶ್ರೀಮತಿ ಹೇಮಾ ಮಳಗಿಯವರು. ಸಾಹಿತ್ಯ, ಸಮಾಜ ಸೇವೆಗಳಲ್ಲದೇ, ಹೊರನಾಡಿನಲ್ಲಿ ಕನ್ನಡ ಹರಡುವ ವಿಶೇಷ ಪ್ರಯತ್ನ ಅವರದು.ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸತ್ತಿ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಹೇಮಾ ಅವರು ಮುಂದಿನ ಶಿಕ್ಷಣಕ್ಕಾಗಿ ವಿದ್ಯಾನಗರಿ ಧಾರವಾಡಕ್ಕೆ ತೆರಳಿದರು. ಅಲ್ಲಿನ ಪ್ರತಿಷ್ಠಿತ ಕರ್ನಾಟಕ ವಿದ್ಯಾಲಯದಿಂದ  ವಾಣಿಜ್ಯ ಕ್ಷೇತ್ರದಲ್ಲಿ ಪದವಿ ಸಂಪಾದಿಸಿದರು. ಜೀವನವೊಂದು ನಿರಂತರ ಕಲಿಕೆಯ ಮಾರ್ಗವೆಂದು ನಂಬಿದ ಅವರು ಮುಂದೆ ಪುಣೆ ವಿಶ್ವವಿದ್ಯಾಲಯದಿಂದ "ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ" ಅಭ್ಯಸಿಸಿ ಪದವಿ ಪಡೆದಿದ್ದಾರೆ.

**ಸಾಹಿತ್ಯಿಕ ಸಾಧನೆಗಳು:**

ಹೇಮಾ ಅವರದು ಎಲ್ಲ ಸಾಹಿತ್ಯಿಕ ಪ್ರಕಾರಗಳಲ್ಲಿ ಎತ್ತಿದ ಕೈ. ಕಥೆ, ಕವನ, ನಾಟಕ, ವಿಮರ್ಶೆಗಳನ್ನು ಬರೆದದ್ದಲ್ಲದೇ, ಕಾದಂಬರಿಗಳನ್ನೂ ಕೂಡ ಬಿಡುಗಡೆ ಮಾಡಿದ್ದಾರೆ. ಭಾರತದ ಬೇರೆ ಬೇರೆ ಪ್ರದೇಶಗಳ ವಿಶಿಷ್ಟ ತಿಂಡಿ ಪದಾರ್ಥಗಳ ಅಭ್ಯಾಸ ಮಾಡಿ, ಅವುಗಳನ್ನು ತಯಾರಿಸುವ ವಿಧಾನದ ಪಾಕಶಾಸ್ತ್ರದ ಲೇಖನಗಳನ್ನೂ ಬರೆದಿದ್ದಾರೆ. ನಾಟಕಗಳನ್ನು ರಚಿಸಿ ಅವುಗಳನ್ನು ರಂಗಮಂಚದ ಮೇಲೆ ಹಾಗೂ Online ಮೂಲಕ ಪ್ರದರ್ಶಿಸಿದ್ದಾರೆ. ಸಾಮಾಜಿಕ ಸಂದೇಶ ಬೀರುವ ಅವರ ನಾಟಕಗಳು ಪುಣೆಯಲ್ಲಿ ಜನ ಮನ್ನಣೆ ಗಳಿಸಿವೆ. ಈ ಸಾಹಿತ್ಯದ ಮಾರ್ಗದಲ್ಲಿ ಹೇಮಾ ಅವರಿಗೆ ಅನೇಕ ಪುರಸ್ಕಾರ, ಗೌರವಗಳು ದೊರಕಿವೆ. ಬುದ್ಧಿಜೀವಿಗಳ ಬಳಗ ಮೈಸೂರು, ಕೆಎಸ್ ನರಸಿಂಹಸ್ವಾಮಿ ಅವರ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ಕವನ ಸ್ಪರ್ಧೆಯಲ್ಲಿ ಹೊರನಾಡು ಕನ್ನಡಿಗರ ವಿಭಾಗದಲ್ಲಿ ರಾಜ್ಯಮಟ್ಟದ ಪ್ರಶಸ್ತಿ ದೊರೆಕಿದೆ. ಅನೇಕ ಕವನ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯಮಟ್ಟದ ಉತ್ತಮ ಕವನ ಪ್ರಶಸ್ತಿ ಗಳಿಸಿದ ಹೆಗ್ಗಳಿಕೆ ಅವರದು. ಅವರ ನಾಟಕ ಕೃತಿ 'ಬೆಳ್ಳಿ ಮಲ್ಲಿಗೆ' ಮುಂಬೈನಲ್ಲಿ ಬಿಡುಗಡೆ ಮಾಡಿದ್ದಾರೆ. ಅತ್ಯುತ್ತಮ ಸಾಹಿತ್ಯಕ್ಕಾಗಿ "ಭಾರತ ಕಲಾಭೂಷಣ" ರಾಷ್ಟ್ರ ಪ್ರಶಸ್ತಿಯನ್ನು ಕನ್ನಡ ಕಲರವ ಕಥಾಬಿಂದು ಪ್ರಕಾಶನದವರು ನೀಡಿ ಗೌರವಿಸಿದ್ದಾರೆ. ಧಾರವಾಡದಲ್ಲಿ ಜರುಗಿದ ಪ್ರಥಮ ರಾಜ್ಯಮಟ್ಟದ ಮಹಿಳಾ ಸಮ್ಮೇಳನದಲ್ಲಿ ಅವರಿಗೆ "ಕನ್ನಡ ರತ್ನ" ಪ್ರಶಸ್ತಿ ನೀಡಲಾಯಿತು. "ಇರಳು ಸರಿದಾಗ" ಮತ್ತು "ಹೃದಯಾ" ಕಾದಂಬರಿಗಳನ್ನು ಬಿಡುಗಡೆ ಮಾಡಿದ ಹೇಮಾ ಅವರು, ಯ. ರು. ಪಾಟೀಲ್ ಹಾಗೂ ಸ. ರಾ. ಸೂಳಕೂಡೆ ಅವರು ರಚಿಸಿದ "ಸರಳ ಕಥೆಗಳು" ಎಂಬ ಹತ್ತು ಕಥೆಗಳ ಸಂಕಲನದ ವಿಮರ್ಶೆ

ಮಾಡಿದ್ದಾರೆ. ಗ್ರಾಮಾಂತರ ಬುದ್ಧಿ ಜೀವಿಗಳ ಬಳಗ ಮೈಸೂರ ಜಿಲ್ಲೆ, ಇವರು 23/02/2025 ರಂದು "ವಿಶ್ವಮಾನ್ಯ ಕನ್ನಡಿಗ ಪ್ರಶಸ್ತಿ" ನೀಡಿ ಸನ್ಮಾನಿಸಿದರು. ಇದೇ ಕಾರ್ಯಕ್ರಮದಲ್ಲಿ ಅವರ "ಕಾವ್ಯಧಾರೆ" ಹಾಗೂ "ಕಾವ್ಯಲಹರಿ" ಎರಡು ಕವನ ಸಂಕಲನಗಳನ್ನು ಬಿಡುಗಡೆ ಮಾಡಲಾಯಿತು.

**ಕನ್ನಡ ಭಾಷಾ ಸೇವೆ:**

ಪುಣೆಯಲ್ಲಿನ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ಅವರು ಕನ್ನಡ ಸಾಹಿತ್ಯ ಮತ್ತು ಕಲಿಕೆಗಾಗಿ ಸಮಯ ಮೀಸಲಿಡಲು ತಮ್ಮ ವೃತ್ತಿಯಿಂದ ಸ್ವ-ಇಚ್ಛೆಯಿಂದ ನಿವೃತ್ತಿ ಪಡೆದಿದ್ದಾರೆ. "ನಮ್ಮವರು" ಕನ್ನಡ ಸಂಘದ ವತಿಯಿಂದ ವಿಶ್ವದಾದ್ಯಂತ ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಉಚಿತವಾಗಿ ಕನ್ನಡ ಕಲಿಸುವ ಅವರು "ಕನ್ನಡ ಕಲಿ" ವರ್ಗವನ್ನು ನೇರವಾಗಿ ಮತ್ತು Online ಮುಖಾಂತರ ಅನೇಕ ವರ್ಷಗಳಿಂದ ನಡೆಸುತ್ತಿದ್ದಾರೆ. ಹೊರನಾಡಿನಲ್ಲಿ ಕನ್ನಡ ಉಳಿಸಿವ ಅವರ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಪತಿ, ಕನ್ನಡ ಪ್ರೇಮಿ ಶ್ರೀ ಧೀರೇಂದ್ರ ಮಳಗಿ ಅವರ ಸಹಕಾರದಿಂದ ಬಹುಮುಖ ಸಮಾಜಸೇವೆ ಕಾರ್ಯಗಳಲ್ಲಿ ನಿರತರಾದ ಹೇಮಾ ಮಳಗಿ ಅವರಿಗೆ ಹರ್ಷಿತಾ ಮತ್ತು ಸುತೇಜ್ ಎಂಬ ಪುತ್ರಿ-ಪುತ್ರರಿದ್ದು ಅವರಲ್ಲಿಯೂ ಕನ್ನಡದ ಬೀಜವನ್ನು ಬಿತ್ತಿದ್ದಾರೆ. ಹೇಮಾ ಮಳಗಿಯವರ ಕನ್ನಡ ಸೇವೆ ಹೀಗೆಯೇ ನಿರಂತರವಾಗಿ ನಡೆಯಲಿ, ಅವರ ಸಾಹಿತ್ಯ ಮತ್ತು ಸಮಾಜ ಸೇವೆಗಳನ್ನು ಗುರುತಿಸಿ, ಅನೇಕ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಸಂದಲೆಂದು ನಮ್ಮ ಹಾರೈಕೆ.



# ಮುದ್ದು ಅಮ್ಮ

ಮುದ್ದುಮರಿ, ನನ್ನಮರಿಯೆನುತ
ಅಮ್ಮ ಬಳಿಗೆ ಬಂದಳು
ಬೆಳಗಾಯ್ತು ಏಳು ಕಂದನೆನುತ
ಮುತ್ತನೊಂದ ಕೊಟ್ಟಳು||

ಬಲಗಡೆಗೆ ತಿರುಗಿ ಏಳಬೇಕು
ಭೂತಾಯಿಗೆ ನಮಿಸಬೇಕು
ಕೈ ಕಾಲು ಮುಖ ತೊಳೆಯಬೇಕು
ಬಾನದೊರೆಗೆ ಕರ ಮುಗಿಯಬೇಕು||

ಹಾಲು ಕುಡಿದು ಜಳಕ ಮುಗಿಸಿ
ಗಜಾನನನ ಶ್ಲೋಕ ಪಠಿಸಿ
ಹಠವ ಮಾಡದೆ ತಿಂಡಿ ಮುಗಿಸಿ
ಸಮವಸ್ತ್ರ ಧರಿಸಿ ಶಾಲೆಗೆ
ಹೋಗಬೇಕು||

ಅಮ್ಮ ಕಲಿಸಿದ ಶಿಸ್ತು ಅರಿತೆ
ಗುರುವು ಕಲಿಸೊ ಪಾಠ ಕಲಿತೆ
ಗೆಳೆಯರ ಜೊತೆ ಆಟದಿ ಬೆರೆತೆ
ಅಜ್ಜ ಅಜ್ಜಿ ಖುಷಿಯಲಿ ನಾ  ಕಲೆತೆ

-ರತ್ನಾ ಬಡವನಹಳ್ಳಿ



# ಶಾಲೆಯ ಪುನರಾರಂಭ: ಮಾಸ್ತರರ ಮನೆ ಮತ್ತು ಹಳ್ಳಿಯ ಶಾಲೆ




-ಸುಭಾಶ್ಚಂದ್ರ ಸಕ್ರೋಜಿ


ಇದು 1960 ನೇ ಇಸ್ವಿಯ ಪ್ರಸಂಗ. ಹಳ್ಳಿಯ ಸರಕಾರಿ ಪ್ರಾಥಮಿಕ ಶಾಲೆ. 6 ನೇ ಇಯತ್ತೆ ಮುಗಿಸಿ 7 ನೇ ಇಯತ್ತೆಗೆ ಕಾಲಿಡುವವನಿದ್ದೆ. ಬಹಳ ಹುಶ್ಯಾರ ಹುಡುಗ ಎಂಬುದಲ್ಲದೆ ಅತಿ ಪ್ರಾಮಾಣಿಕ ಹುಡುಗನೆಂಬ ಬಿರುದು ಅಂಟಿಕೊಂಡಿದ್ದಕ್ಕೆ, ಅವನಿಗೆ ಎರಡು ಕೋಡು ಬಂದಿದ್ದಾವೆ ನೋಡ್ರಿ ಎಂದು ನನ್ನ ಗೆಳೆಯರು ಹೊಟ್ಟೆಕಿಚ್ಚು ಪಡುತ್ತಿದ್ದರು. ಅಂದರೆ ಆವಾಗ ನನಗೆ ಸ್ವಲ್ಪ ಸೊಕ್ಕು ಇತ್ತೆಂದು ಈಗ ತಿಳಿಯುತ್ತದೆ. ಆದರೆ ನಾನು ಎಲ್ಲ ಗುರುಗಳ ಪ್ರೀತಿಗೆ ಪಾತ್ರನಾದವ ಎಂಬ ಹೆಮ್ಮೆ ಮಾತ್ರ ಇತ್ತು. ಆವಾಗ ನಮ್ಮ ವರ್ಗಗಳು ಮುಂಜಾನೆ 7-30 ರಿಂದ 10-30 ಘಂಟೆ, ಹಾಗೂ ಮದ್ಯಾಹ್ನ 2-30 ರಿಂದ ಸಂಜೆ 5-30 ರ ವರೆಗೆ ಇರುತ್ತಿದ್ದವು. ಸಂಜೆಗೆ ಕವಾಯತ್, ಕಬಡ್ಡಿ, ಖೋ ಖೋ ಆಟಗಳು. ಒಂದು ಶಾಲೆಗೆ ಇಬ್ಬರು ಮೂವರು ಮಾಸ್ತರರು. ಎಪ್ರಿಲ್'ದಲ್ಲಿಯೇ ಪರೀಕ್ಷೆ ಮುಗಿಸಿ ಪಾಸ-ನಪಾಸ (ಫಲಿತಾಂಶ) ತಿಳಿಸಿ ಮೇ ತಿಂಗಳ ಸೂಟಿಗೆ ಸ್ಥಾನಿಕ ಮಾಸ್ತರರನ್ನು ಬಿಟ್ಟು ಉಳಿದವರು ತಮ್ಮ ತಮ್ಮ ಊರಿಗೆ ಹೋಗಿರುತ್ತಿದ್ದರು; ಆದರೆ ಅವರು ಮರಳಿ ಬರುವದು ಶಾಲೆ ಪ್ರಾರಂಭವಾಗುವ ಹಿಂದಿನ ದಿನ ಮಾತ್ರ.

ಈರಪ್ಪ ವಾಲಿ, ಅಪ್ಪಸಿ ಮೆಟಗುಡ್ಡ, ವೆಂಕಟ ಘಡತರೆ ಮತ್ತು ಬಸನಗೌಡ ಪಾಟೀಲ ನಾಲ್ವರು ಒಳ್ಳೆಯ ಗೆಳೆಯರು. ಪರಊರಿನ ಮಾಸ್ತರರು ಬರುವ ಒಂದು ದಿನ ಹಿಂದೆ ಮಾಸ್ತರರ ಮನೆಯ ಬಾಗಿಲ ತೆಗೆದು, ಕಸ ಹೊಡೆದು, ನದಿಗೆ ಹೋಗಿ ಒಂದು ಕೊಡ ಕುಡಿಯುವ ನೀರು, ಮತ್ತು ಬಳಸಲಿಕ್ಕೆ ಒಂದು ಬಕೆಟ್ ನೀರು ತಂದು ಇಟ್ಟಿರುತ್ತಿದ್ದೆವು. ಈರಪ್ಪ ಮತ್ತು ವೆಂಕಟ ಕಂದೀಲ ಪಾವ ಒರೆಸಿ ಚಿಮಣೀ ಎಣ್ಣೆ ಹಾಕಿ ಇಟ್ಟಿರುತ್ತಿದ್ದರು. ಅಪ್ಪಸಿಯು ನಾವು ಕೂಡ್ರುವ ಶಿಕೋಣಿ ಕಟ್ಟೆಗೆ ನೀರು ಹೊಡೆದು ಸ್ವಚ್ಛಮಾಡಿ ಇಟ್ಟಿರುತ್ತಿದ್ದನು. ನಮ್ಮ ಮಾಸ್ತರ ಚರಲಿಂಗಪ್ಪ ಸಂಗನಬಸಪ್ಪ ಹೊಳಿ ಇವರು ಮುದ್ದೇಬಿಹಾಳದಿಂದ ಬರುವವರಿದ್ದರು. ಆವಾಗ ನಮ್ಮೂರಿಗೆ ಬಸ್ಸು ಬರತ್ತಿದ್ದಿಲ್ಲ. ಒಂದು ಮೈಲು ದೂರದ ಬಾಗಲಕೋಟ ಮುಧೋಳ ಲೈನ್ ಕ್ರಾಸ್ಸಿಗೆ ಹೋಗಿ ನಿಲ್ಲಬೇಕು. ಅಪ್ಪಸಿಯ ಮಾವಿನ ಗಿಡದ ಹೊಲ ಅಲ್ಲಿಯೇ ಇದ್ದುದರಿಂದ, ಇಬ್ಬರೂ ಕೂಡಿ ಹೋಗಿ ಬಸ್ಸಿನ ದಾರಿ ನೋಡುತ್ತ ಕುಳಿತಿದ್ದೆವು. 2 ರ ಬಸ್ಸಿಗೆ ಬರದಿದ್ದರೆ, 5 ರ ಬಸ್ಸಿಗೆ ಬಂದೇ ಬರುತ್ತಾರೆಂಬುದು ನಮ್ಮ ಖಾತ್ರಿ.

ಯಾಕೆಂದರೆ ಆವಾಗ ಸರಕಾರಿ ಶಾಲೆಯಲ್ಲಿ ಒಂದು ನಿಯಮವಿತ್ತು; ಶಾಲೆಯ ಪುನರಾರಂಭದ ದಿನ ಮಾಸ್ತರರು ಬಂದು ಹಾಜರಾಗದಿದ್ದರೆ, ಮೇ ತಿಂಗಳ ಸೂಟಿಯನ್ನು ಅವರ ವ್ಯಯಕ್ತಿಕ ರಜೆ ಎಂದು ಪರಿಗಣಿಸಲಾಗುತ್ತಿತ್ತು. ಬರುವ ಕರೆಕ್ಟ್ ಸುದ್ದಿ ಮುಟ್ಟಿಸಲು ಆವಾಗ ಪೋಸ್ಟಿನ ಹೊರತು ಫೋನ್ ಅಥವಾ ಮೊಬೈಲ್ ಸೌಕರ್ಯವಿದ್ದಿಲ್ಲ. ಬಸ್ಸು ಸ್ವಲ್ಪ ತಡವಾಗಿ ಬಂತು. ಮಾಸ್ತರರು ಕುಟುಂಬ ಸಮೇತ ಬಂದಿಳಿದರು.

ಅಕ್ಕಾ ಅವರು ಮಗಳನ್ನು ಬಗಲಲ್ಲಿ ಎತ್ತಿಕೊಂಡರು. ಮಾಸ್ತರರ ಕೈಯಲ್ಲಿ ಎರಡು ಚೀಲ ಇದ್ದವು. ಒಂದು ಚೀಲದಲ್ಲಿ ಮನೆಯ ಹೊಲದವು ಎಂದು ಎರಡೆರಡು ಸೇರು ಕಡ್ಲಿ, ಹೆಸರು, ಅಲಸಂದಿ ಕಾಳು ಕಟ್ಟಿ ತಂದಿದ್ದರು. ನಾನು ಮತ್ತು ಅಪ್ಪಸಿ ಇಬ್ಬರೂ ಆ ಚೀಲವನ್ನು ಸ್ವಲ್ಪ ಸ್ವಲ್ಪ ಹೊತ್ತು ಹೆಗಲ ಮೇಲೆ ಹೊತ್ತುಕೊಂಡು ಊರ ಹಾದಿ ಹಿಡಿದೆವು. ಅಷ್ಟರಲ್ಲಿ ಮುಧೋಳ ಕಡೆಯಿಂದ ಚಿಮಣಪ್ಪಗೋಳ ಪಾಂಡೂನ ಚಕ್ಕಡಿ ಸಂತೆಯ ಸಾಮಾನು ತುಂಬಿಕೊಂಡು ಊರ ಕಡೆಗೆ ಹೊರಟಿತ್ತು. ಚಕ್ಕಡಿ ತುಂಬಿತ್ತು; ಆದರೂ ನಮ್ಮ ವಿನಂತಿಯ ಮೇರೆಗೆ ಪಾಂಡಪ್ಪನು ನಾನು ನಿಮ್ಮ ಚೀಲವನ್ನು ಸಾಲೆಯ ಮೂಲೆಯ ಕಟ್ಟೆಗೆ ಇಡುತ್ತೇನೆ, ನೀವು ಮಾತ್ರ ನಡೆಯುತ್ತ ಬರ್ರಿ ಎಂದನು. ಸದ್ಗುಣದ ಗುರುಗಳಿಗೆ ಮತ್ತು ಆಜ್ಞಾಧಾರಕ ವಿದ್ಯಾರ್ಥಿಗಳಿಗೆ ದೇವರು ಹೇಗೆ ಸಹಾಯಕ್ಕೆ ಬರುವನೆಂಬ ಬೇರೆ ಉದಾಹರಣೆ ಹೇಳಬೇಕಿಲ್ಲ. ಪುರಾತನ ಕಾಲದಿಂದಲೂ ಗುರುಕುಲದಲ್ಲಿಯ ಶಿಷ್ಯಸೇವಾ ಪರಂಪರೆ ಹಳ್ಳಿಗಳಲ್ಲಿ ಇನ್ನೂ ಉಳಿದಿದೆಯೆಂದು ಹೇಳಬಹುದು.

ಇನ್ನು ಶಾಲೆಯ ಪುನರಾರಂಭದ ಮೊದಲ ದಿನ ಎಲ್ಲ ವಿದ್ಯಾರ್ಥಿ ಹಾಗೂ ಮಾಸ್ತರರು ಸರಿಯಾಗಿ 7 ಘಂಟೆಗೆ ಹಾಜರ ಆಗುವರು. ತಿಂಗಳುಗಟ್ಟಲೆ ಬಂದ್'ಯಿದ್ದ ಶಾಲೆಯ ಬಾಗಿಲ ತೆರೆದು, ಎಲ್ಲ ವಿದ್ಯಾರ್ಥಿಗಳು ಕೂಡಿ ಶಾಲೆಯ ವಿವಿಧ ಕೋಣೆ ಹಾಗೂ ಪಟಾಂಗಣ ಕಸ ಹೊಡೆಯುವದು. ಮಾಸ್ತರರ ಖುರ್ಚಿ ಟೇಬಲ್ ಕಪಾಟುಗಳನ್ನು ಒರೆಸಿ ಸ್ವಚ್ಛ ಮಾಡುವದು. ಮೊದಲ ಒಂದೆರಡು ದಿನ ಅಭ್ಯಾಸವೇನೂ ಇರುತ್ತಿದ್ದಿಲ್ಲ. ಆಯಾ ಕ್ಲಾಸಿನ ಮಾಸ್ತರರು ತೇರ್ಗಡೆಯಾದ ವಿದ್ಯಾರ್ಥಿಗಳ ಹೆಸರನ್ನು ಮುಂದಿನ ಕ್ಲಾಸಿನ ಹಾಜರಿ ಪುಸ್ತಕದಲ್ಲಿ ಬರೆಯುತ್ತಿದ್ದರು. ಪಾಸಾಗಿ ಮುಂದಿನ ಕ್ಲಾಸಿಗೆ ಹೋದ ವಿದ್ಯಾರ್ಥಿಗಳ ಹಳೆಯ ಪುಸ್ತಕಗಳನ್ನು, ಈಗ ಪಾಸಾಗಿ ಬಂದ ವಿದ್ಯಾರ್ಥಿಗಳು, ಪುಸ್ತಕ ಬದಲಾಗಿರದಿದ್ದರೆ, ಮತ್ತು ಸುಸ್ಥಿತಿಯಲ್ಲಿದ್ದರೆ, ವ್ಯವಹಾರ ಮಾಡಿ ಅರ್ಧ ಬೆಲೆಗೆ ಕೊಂಡುಕೊಳ್ಳುವದು. ಈ ಉಪಕ್ರಮವು ಮಕ್ಕಳಿಗೆ ಸಿಗುವ ಜೀವನದ ಮೊದಲ ಮೆಟ್ಟಿಲಾಗಿದೆ. ಇಷ್ಟು ಮಾಡುತ್ತಲೇ ಶುಕ್ರವಾರ ಬರುವದು. ಶಾಲೆಗೆ ಅರ್ಧ ದಿನ ಸಂತೆಯ ಸೂಟಿ. ಆ ಅರ್ಧ ದಿನವನ್ನು ನಾವು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದೆವೆಂದರೆ, ಅದು ಸಾಂಘೀಕ ಚಟುವಟಿಕೆ. ಗಂಡು ಹುಡುಗರು ಸಮೀಪದ ತೋಟದಿಂದ, ಸೆಗಣಿ ಮತ್ತು ನೀರು ತಂದು ಕೊಡುವದು. ಹುಡುಗಿಯರು ನೆಲ ಸಾರಿಸುವದು. ಇನ್ನುಳಿದ ವಿದ್ಯಾರ್ಥಿಯರು ಕಂಪೌಂಡದಲ್ಲಿ ಅಲ್ಲಲ್ಲಿ ತಗ್ಗು ತೆಗೆದು ಹೂವಿನ ಗಿಡ ಹಚ್ಚುವದು. ಮತ್ತು ಆಯಾ ಕ್ಲಾಸಿನವರು ಬಿಡುವಿನ ವೇಳೆಯಲ್ಲಿ ಗಿಡಗಳಿಗೆ ನೀರು ಉಣಿಸುವದು. ಆವಾಗ್ಗೆ ಹಳ್ಳಿಯ ಸರಕಾರಿ ಶಾಲೆಗಳಲ್ಲಿ ಇಂಥ ಕೆಲಸ ಮಾಡಲು ಸಿಪಾಯಿ ವಗೈರೆ ಇರುತ್ತಿದ್ದಿಲ್ಲ. ಮತ್ತು ವರ್ಷವಿಡೀ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ ವಿದ್ಯಾರ್ಥಿಗಳಿಗೆ ಸಾಂಘೀಕ ಚಟುವಟಿಕೆಯಲ್ಲಿ ವಿಶೇಷ ಮತ್ತು ಅಧಿಕ ಮಾರ್ಕ್ಸ್ ದೊರೆಯುತ್ತಿದ್ದವು. ಶಾಲೆಯ ಮೊದಲ ವಾರದಲ್ಲಿಯೇ ಆಯಾ ಕ್ಲಾಸಿನ ಮಾನಿಟರ್ ಮತ್ತು ಮಂತ್ರಿಮಂಡಳ ರಚಿಸಿ, ಗುರುಗಳು ಮಕ್ಕಳಿಗೆ ಶಿಸ್ತಿನ ಪಾಠ ಕಲಿಸುತ್ತಿದ್ದರು. ಆದರೆ ಈಗ ಪಟ್ಟಣದ ಶಾಲೆಗಳಲ್ಲಿ ಈ ಗುರುಸೇವಾ ಉಪಕ್ರಮ ಇರಲಿಕ್ಕಿಲ್ಲವೆಂದು ನನಗೆ ಅನಿಸುತ್ತದೆ. ಆದರೆ ಶಾಲೆಯ ಪುನರಾರಂಭದ ದಿನ ಪಟ್ಟಣದ ಶಾಲೆಯ ಮಕ್ಕಳು, ಹಳ್ಳಿಯ ಶಾಲೆಯ ಮಕ್ಕಳು ತಮ್ಮ ಗುರುಗಳಿಗೆ ಸಲ್ಲಿಸುವ ಗುರುಭಕ್ತಿಯಿಂದ ವಂಚಿತರಾಗುತ್ತಾರೆಂದು ಹೇಳಬಯಸುತ್ತೇನೆ.




ವೆಂಕಟ್ ಭಟ್, ಎಡನೀರು, ಜಿ: ಕಾಸರಗೋಡು, ಕೇರಳ

### ಶಾಲೆ - ಜಡೆ

ಗದರಿದರು ಅಂದು ಗುರುಗಳು
ಎಳೆದವರಾರು ಅವಳ ಜಡೆ!

ಕೊನೆಯ ಬೆಂಚಿಂದ ಕೇಳಿಸಿತು
ನೋಡೇಇಲ್ಲ ನಾನವಳ ಕಡೆ!!

ಬಂದಿತ್ತು ಇನ್ನೊಂದು ಧ್ವನಿ
ನೋಡಿದ್ದರೆ ನೀನವಳ ಬಿಡೆ!!!

ಬಾಯಿ ಮುಚ್ಚದಿದ್ದರೆ ನೀವು
ಎತ್ತುವೆನು ನಾಗರಬೆತ್ತದ ಹೆಡೆ!!!!

\- ಎ. ಹರೀಶ ಡೋಂಗ್ರೆ

### ಶಾಲೆ?

ಆಗ ಬದುಕುವ ಕಲೆ
ಕಲಿಸುತ್ತಿದ್ದರು ಶಾಲೆಯಲ್ಲಿ

ಈಗ ಅದನ್ನೆಲ್ಲ ಮರೆಸಿದ್ದಾಳೆ
ಮದುವೆ ನಂತರದಲ್ಲಿ

\- ಕುಮಾರ ಚಲವಾದಿ

### ಶಾಲೆ(ಯ)/ ಅನುಭವ

ಮನವೊಲಿಸುವುದ ಕಲಿತೆ
ಶಾಲೆಯಿಂದ

ಮನೆ ಒರೆಸುವುದ
ಕಲಿತೆಪಡಸಾಲೆಯಿಂದ..😂
😂

\- ಅನಂತಕುಮಾರ

ಈ ಸಂಚಿಕೆಗಾಗಿ "ಶಾಲೆ" ವಿಷಯದ ಬಗ್ಗೆ ಚುಟುಕುಗಳನ್ನು ಆಯ್ದು ಕಳುಹಿಸಿದ ಅಖಿಲ ಭಾರತ ಚುಟುಕು ಕಾವ್ಯ ಬಳಗದ ಶ್ರೀ ಹರೀಶ ಡೋಂಗ್ರೆ ಮತ್ತು ಶ್ರೀಮತಿ ನವೀನಾ ರಾಯ್ಕರ್ ಅವರಿಗೆ ಧನ್ಯವಾದಗಳು.

# ತಿಂಗಳ ಪ್ರತಿಭೆ ಕಥಕ್ ನೃತ್ಯಗಾರ್ತಿ

## ಕುಮಾರಿ ಧನಶ್ರೀ ಜೋಗಳೆಕರ್



ಕಾಲು ಗೆಜ್ಜೆಯ ನಾದ, ಭಾವ ಮುದ್ರಿಕೆ, ಹೊಳಪು ಕಂಗಳಿಂದ ಆಕರ್ಷಕ ಕಥಕ್ ನೃತ್ಯ ಮಾಡುವ ಕುಮಾರಿ ಧನಶ್ರೀ ಜೋಗಳೆಕರ್ ನಮ್ಮ ಈ ತಿಂಗಳ ಹೆಮ್ಮೆಯ ಪ್ರತಿಭೆ. ಭಾರತೀಯ ಸಂಸ್ಕೃತಿಯ ಭವ್ಯ ಪರಂಪರೆಯ ಗುರುತರ ಅಂಗವಾದ ನೃತ್ಯಕಲೆಯನ್ನು ಧನಶ್ರೀ ಆರಂಭಿಸಿದ್ದು ತನ್ನ ಏಳನೆಯ ವಯಸ್ಸಿನಲ್ಲಿ. ಕಥಕ್ ನೃತ್ಯದತ್ತ ಒಲವು ತೋರಿಸಿದ ಈ ಹುಡುಗಿ ಅದನ್ನೇ ತನ್ನ ಕಲೆಯ ಅಂಗ ಹಾಗು ಜೀವನ ಉದ್ದೇಶವಾಗಿರಿಸಿ ಮುಂದುವರೆದಳು. ಕಥಕ್ ನೃತ್ಯವೇ ತನ್ನನ್ನು ಓರ್ವ ಕಲೆಗಾರ ಹಾಗು ಉತ್ತಮ ವ್ಯಕ್ತಿಯಾಗಿ ರೂಪಿಸಿದೆ ಎಂದು ಹೇಳುತ್ತಾಳೆ ಈ ಕಿಶೋರಿ.

ಗಾಯಕ ದಂಪತಿಗಳಾದ, ಗೀತಾ ಜೋಗಳೆಕರ್ ಮತ್ತು ಮಿಲಿಂದ ಜೋಗಳೆಕರ ಅವರ ಸುಪುತ್ರಿಯಾ ಕಲೆಯ ವಾತಾವರಣದಲ್ಲೇ ಬೆಳೆದ ಧನಶ್ರೀಗೆ ಮನೆಯಲ್ಲಿ ಸಹಜವಾಗಿಯೇ ಕಲೆಗೆ ಪ್ರೋತ್ಸಾಹ ದೊರಕಿತು. ನಂತರ ಪುಣೆಯ ಪ್ರಸಿದ್ಧ ನೃತ್ಯ ಗುರುಗಳಾದ ಶ್ರೀಮತಿ ಪದ್ಮಶ್ರೀ ಜೋಷಿಯವರ ಅಡಿಯಲ್ಲಿ ನೃತ್ಯಾಭ್ಯಾಸ ಮಾಡಲು ಆರಂಭಿಸಿದಳು. ತನ್ನೆಲ್ಲ ಸಾಧನೆಗೆ ತಂದೆ-ತಾಯಿಯವರ ಪ್ರೋತ್ಸಾಹದ ಜೊತೆಗೆ, ಗುರು ಪದ್ಮಶ್ರೀ ಜೋಷಿಯವರ ಸತತ ಮಾರ್ಗದರ್ಶನ ಮತ್ತು ಕಲೆಯ ಪ್ರತಿ ಸಮರ್ಪಣೆಯೇ ಕಾರಣವೆನ್ನುತ್ತಾಳೆ, ಧನಶ್ರೀ.

# ಧನಶ್ರೀ ಜೋಗಳೆಕರ್



ಮಾನಸಿಕ ಶಾಸ್ತ್ರದಲ್ಲಿ ಸ್ನಾತಕ ಪದವಿ ಪಡೆದ ಧನಶ್ರೀ, ಪ್ರತಿಷ್ಠಿತ ಭಾರತೀಯ ವಿದ್ಯಾಪೀಠದಿಂದ ಕಥಕ್ ನೃತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾಳೆ. ಗಂಧರ್ವ ಮಹಾವಿದ್ಯಾಲಯದಿಂದ ನೃತ್ಯ ವಿಶಾರದ ಪದವಿ ಸಂಪಾದಿಸಿದಲ್ಲದೇ ಸದ್ಯ, "ಅಲಂಕಾರ" ಪದವಿಗಾಗಿ ತಯಾರಿ ನಡೆಸಿದ್ದಾಳೆ.

ಭಾರತಾದ್ಯಂತ ನೃತ್ಯ ಪ್ರದರ್ಶನ ನೀಡಿದ ಧನಶ್ರೀ, ಪುಣೆ, ಮುಂಬೈ, ದೆಹಲಿ ಮತ್ತು ಲಕ್ನೌದಲ್ಲಿ ಅನೇಕ ನೃತ್ಯ ಮಹೋತ್ಸವದಲ್ಲಿ ಗುರು ಪದ್ಮಶ್ರೀ ಜೋಷಿಯವರೊಂದಿಗೆ ವೇದಿಕೆ ಹಂಚಿಕೊಂಡಿದ್ದಾಳೆ. ಭಾರತ ಸರಕಾರದ ಸಂಸ್ಕೃತಿ ಮಂತ್ರಾಲಯದಿಂದ ಪ್ರದಾನಿಸುವ ಪ್ರತಿಷ್ಠಿತ ಸಾಂಸ್ಕೃತಿಕ ಸ್ತ್ರೋತ ಮತ್ತು ಪ್ರಶಿಕ್ಷಣ ಕೇಂದ್ರ (Centre for Cultural Resources and Training) ವಿದ್ಯಾರ್ಥಿ ವೇತನ ಪಡೆದ ಧನಶ್ರೀಗೆ ನೃತ್ಯದ ಹಾದಿಯಲ್ಲಿ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.

ಭಾರತ ಸರಕಾರದ ಗಣರಾಜ್ಯೋತ್ಸವ ಸಮಾರಂಭದ ಅಂಗವಾಗಿ 26 ಜನವರಿ 2024 ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ತಂಡದೊಂದಿಗೆ ನೃತ್ಯ ಪ್ರದರ್ಶಿಸಿವ ಗೌರವ ಪ್ರಾಪ್ತವಾಗಿದ್ದನ್ನು ಅವಳು ಹೆಮ್ಮೆಯಿಂದ ಸ್ಮರಿಸುತ್ತಾಳೆ.

ತನ್ನ ಕಲಾ ಸೇವೆಯನ್ನು ಅವಿರತವಾಗಿ ಶ್ರದ್ಧೆಯಿಂದ ಮುಂದುವರೆಸಿದ ಧನಶ್ರೀಗೆ ಇನ್ನೂ ಹೆಚ್ಚಿನ ಯಶಸ್ಸು, ಪುರಸಾರ ಮತ್ತು ಮನ್ನಣೆ ಸಿಗಲೆಂದು ನಾವು ಆಶಿಸುತ್ತೇವೆ.

# ಬದುಕೊಂದು ಕಲೆ

ಕಲಿಕೆ ಕಲೆಯಾಗಲಿ
ಬದುಕಿಗೊಂದು ಬೆಲೆ ಇರಲಿ
ಅಂಕೆಗಳ ಹಿಡಿತಕ್ಕೊಳಪಡದ
ಕಲಿಕೆ ಅನಂತದ ಆಕಾಶವಾಗಲಿ...

ಜ್ಞಾನ ಅನುಕರ್ಷಣೀಯವಾಗಲಿ
ಜ್ಞಾನಿಯಿಂದ ಜಗವು ಅನುಗತವಾಗಲಿ
ಅನುಪಮಾನದ ಅನುದ್ಗತಕ್ರಮಕ್ಕೆ
ಅನುಮೋದದ ಅನುಲೇಪವಿರಲಿ...

ಜ್ಞಾನದ ಅನೇಕ ಮುಖಗಳ ಅನಾವರಣವಾಗಲಿ
ಕಲಿಕೆ ನಿತ್ಯ ನಿರಂತರ  ಎನ್ನುವುದು ಸ್ಮರಣೆಯಲ್ಲಿರಲಿ
ಅಪ್ರಮಿತ ಅಭಿಜ್ಞತೆಯಾವಾಸವಾಗಲಿ
ಅಭಿಜ್ಞಾನದ ಅಭಿಯೋಗ ಕಲಿಕೆಗೆ ಸೋಪಾನವಾಗಲಿ...

- ಆರತಿ ಎಸ್ ರಾವ್


# ಚೆಂದದ ಚಿತ್ತಾರ



ಅದಿತಿ ಬಾಜಿ




ಸ್ನೇಹಾ ಬಡಿಗೇರ



ಮಾನ್ಯತಾ ಜೋಷಿ




ಮಹಾಂತ ಜೋಷಿ

# ಸಾಲಿ ಬಾಗಲ ತಗದರ... ನಮಗೆ ಢಕ ಢಕ

- ಶ್ರೀ ನಾಗೇಂದ್ರ ಪ್ರಭುನೋರ



**ಒಮ್ಮೆ** ನಾನು ಕೊಪ್ಪಳಕ್ಕೆ ಹೋಗುತ್ತಿರುವಾಗ ಕೊಪ್ಪಳದ ಸಮೀಪದ ಯಾವುದೋ ಒಂದು ಊರ ಸರ್ಕಾರಿ ಶಾಲೆಯ ಕಂಪೌಂಡ್ ಗೋಡೆಯ ಮುಂಭಾಗದಲ್ಲಿ ಹೀಗೆ ಬರೆದಿತ್ತು. "ಶಾಲೆ, ವ್ಯಕ್ತಿತ್ವ ರೂಪಿಸುವ ವರ್ಕಶಾಪ." ಶಿಕ್ಷಕನಾಗಿರೋ ನನಗ, "ಏ! ಎಂಥಹ ಸಾಲು, ಇದನ್ನು ಹೇಳಿದವರು ಯಾರು? ಅಥವಾ ಶಿಕ್ಷಕರೇ ಈ ರೀತಿ ಬರೆಸಿರಬಹುದಾ?" ಎಂಬುದು ಒಂದು ಕ್ಷಣ ಕಾಡಿದ್ದಂತೂ ಅಕ್ಷರಶಃ ಸತ್ಯ. ಈಗ ಶಾಲೆ ಬಗ್ಗೆ, ಶಿಕ್ಷಣದ ಬಗ್ಗೆ ಮಾತನಾಡುತ್ತಿರುವ ನನಗೆ ಚಿಕ್ಕ ವಯಸ್ಸಿನಲ್ಲಿ ಅಥವಾ ಶಾಲೆಗೆ ಹೋಗುತ್ತಿರುವ ಕಾಲದಲ್ಲಿ, ಶಾಲೆ ಎಂದರೆ ನನಗೆ ಬೇಡವಾದ ಜಾಗ. ಬರೆ, ಓದುವವದರಲ್ಲಿ ಅಲ್ಪ ಮುಂದಿದ್ದರೂ, ಶಾಲೆ ಎಂದರೆ ನನಗೆ ಕಷ್ಟ ಕೊಡುವ ಸ್ಥಳ.

ಇಂದು ನಾವು ನಮ್ಮ ಸುತ್ತಮುತ್ತಲೂ ನೋಡುತ್ತೇವೆ. ಮನೆ ಮುಂದೆ ವ್ಯಾನೋ? ಆಟೋವೋ? ಬಂದು ನಿಂತಾಗ ಹೋಗಲು ಒಲ್ಲೆ ಎನ್ನುವ ಮಕ್ಕಳ ಕೈ, ಕಾಲು ಹಿಡಿದು ಪಾಲಕರು ಅಥವಾ ವ್ಯಾನ್ ಸಿಬ್ಬಂದಿ ಆ ಗಾಡಿಗಳಲ್ಲಿ ದಬ್ಬುತ್ತಿರುವಾಗ ಅವುಗಳ ಚೀರಾಟ, ಹಾರಾಟ

ನೋಡಿದರೆ ಇನ್ನೂ ಕರಳು ಚುರ್ರ ಎನ್ನುವವದಲ್ಲದೆ, ಆ ಮಗುವಿಗೆ ಸಂಕಟದ ಅರಿವು ಆಗುವದು.


ವಿದ್ಯಾರ್ಥಿ ಜೀವನದಲ್ಲಿ ರಜೆಯ ದಿನಗಳು ಎಲ್ಲರಿಗೂ ಇಷ್ಟ. ವಿಶೇಷವಾಗಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗ, ಭಾನುವಾರ ಶಾಲೆಗೆ ರಜೆ ಇರುವುದರಿಂದ ಶನಿವಾರ ಮನಸ್ಸು ತುಂಬಾ ನಿರಾಳ. ಏಕೆಂದರೆ ನಾಳೆಯಂತೂ ಶಾಲೆಗೆ ಹೋಗೋದಿಲ್ಲ. ಏನಾದರೂ ಹೋಮ್ ವರ್ಕ್ ಇದ್ದರೆ ನಾಳೆ ನೋಡಿದ್ದರಾಯಿತು ಎನ್ನುವ ಮನಸ್ಥಿತಿ. ಹಾಗೆಯೇ ದಸರಾ ರಜೆ ಇದ್ದರಂತೂ ಸುಣ್ಣ, ಬಣ್ಣ ಮಾಡುವದರಲ್ಲಿ ಒಗೆದ ಬಟ್ಟೆಗಳನ್ನು ಒಣಿ ಹಾಕುವುದರಲ್ಲಿ, ಹಬ್ಬ ಮಾಡುವದರಲ್ಲಿ ಕಳೆದು ಹೋಗುತ್ತಿತ್ತು.

ರಜೆಯ ನಿಜವಾದ ಮಜಾ ಇರುವುದು ಬೇಸಿಗೆಯ ರಜೆಗಳಲ್ಲಿ. ಎಲ್ಲಾ ಪಾಠ, ಪ್ರವಚನಗಳು ಮುಗಿದು, ಪರೀಕ್ಷೆಗಳಾಗಿ ತಲಿ ಮೇಲಿನ ಭಾರ ಇಳದು, ಮುಂಜಾನೆಯಿಂದ ಸಂಜಿ ತನಕ ಆಟ ಆಡೋದೆ. ಮೊಬೈಲ್‌ಗಳಿರದ, ಟಿವಿಗಳು ಅಷ್ಟಾಗಿ ಇರದ ಕಾಲ. ಎಷ್ಟೇ ಡಿಗ್ರಿ ಸೆಲ್ಸಿಯಸ್ ಬಿಸಿಲಿದ್ದರೂ ಅದು ನಮಗೆ ಹತ್ತುತ್ತಿರಲಿಲ್ಲ. ಹಸಿವು, ನೀರಡಿಕೆಗಳ ಪರಿವು ನಮಗಿರಲಿಲ್ಲ. ಬರೀ ಆಡೋದು. ಗೋಟಿ, ಪತ್ತಾ. ಟೀಪಾ, ಪತ್ತಾ ಅಂದರೆ ಬೆಂಕಿಪೊಟ್ಟಣದ ಮೇಲಿನ ಕವರುಗಳು. ಆವಾಗ ಚಾವಿ, ಚಮೇಲಿ, ಘೋಡಾ ಹೀಗೆ ವಿವಿಧ ತರಹದ ಬೆಂಕಿ ಪೊಟ್ಟಣಗಳು ಇರುತ್ತಿದ್ದವು. ಅದರಲ್ಲಿ ಘೋಡಾ ಹಜಾರ್ಕಿ, ಚಮೇಲಿ ಸೌಕಿ, ಚಾವಿ ದಸ್ಕಿ ಇವನ್ನ ಹುಡುಕಲು ಊರಿನ ಬೀದಿ, ಬೀದಿ ತಿರುಗುತ್ತಿದ್ದೆವು. ಅಲ್ಲದೆ ಗೋಟಿಯಿಂದ ಡುಸ್, ಶಾದಿ, ಲಕ್ಕಿ, ಈ ಹೆಸರಿನ ಆಟಗಳು ಆಡೋದು.



ಒಂದೊಂದು ಆಟಗಳ ನಿಯಮಗಳು ಬೇರೆ, ಬೇರೆ. ಗೋಟಿಗಳನ್ನು, ಪತ್ತಾಗಳನ್ನು, ಟೀಪಾಗಳನ್ನು ಚಡ್ಡಿಯ ಕಿಸೆಗಳಲ್ಲಿ ಇಟ್ಟುಕೊಂಡು, ಚಡ್ಡಿಯ ಜೇಬುಗಳನ್ನು ಊದಿಸಿಕೊಂಡು ಓಡಾಡುತ್ತಿದ್ದೆವು. ಮನ್ಯಾಗ ಬೈಯೋರು, “ಮಾರಿ ಏಟ್ ಖರ್ರಗ ಆಗ್ಯಾದ ನೋಡು. ಸಾಲಿ ಇದ್ದರೆ ನೀವೂ ಹಾದಿಗಿ ಬರ್ತಿರಿ. ಇಲ್ದರ ನೀವೂ ಮನಿಗೆ ಹತ್ತಲ್ಲಾ” ಅಂತಾ. ಹಿಂಗ ಅಪ್ಪ, ಅಮ್ಮನ ಒಂದೂ ಮಾತ ಕೇಳದ ಓಡಾಡೋ ನಮಗ, ಮನ್ಯಾಗ ಹೇಳತಿದ್ರು, “ತಡಿ ಈಗ ಕಾರಹುಣ್ಣಿ ಬಂತು. ನಿಮ್ಮ ಸಾಲಿ ಸುರು ಆಗತಾವಾ” ಅಂತಾ. ಅದನ್ನ ಕೇಳಿದ್ರ ನಮಗ ಎದಿ ಬಡಿತ ಸ್ವಲ್ಪ ಜಾಸ್ತಿ ಆಗೋದು.

ಇನ್ನೇನು ಶಾಲೆ ಯಾವ ದಿನಾಂಕಕ್ಕೆ ಪ್ರಾರಂಭವಗಬೇಕೋ ಅಂದೋ ಅಥವಾ ಒಂದೆರಡು ದಿನ ತಡವಾಗೋ? ಶಾಲೆ ಬಾಗಿಲು ತೆರದಿರುತಿತ್ತು. ಅದನ್ನು ನೋಡಿದ ಅಥವಾ ಕೇಳಿದ ನಮಗ ಢಕಢಕ ಶುರುವಾಗಿ ಶಾಲೆಯ ಕಡೆಗೆ ಮತ್ತು ಮನೆಯ ಕಡೆಗೆ ತಲೆನೇ ಹಾಕುತ್ತಿರಲಿಲ್ಲ. ಅಪ್ಪ, ಅಮ್ಮ ಹೊಲದ ಕೆಲಸಕ್ಕೆ ಹೋದಾದ ಮೇಲೆ ಊಟ ಮಾಡಿ ಮನೆ ಬಿಟ್ರೆ ಮತ್ತೆ ಸಂಜೆನೇ ಮನೆಗೆ ಹೋಗುತ್ತಿದ್ದೆವು.



ಅಪ್ಪ, ಅಮ್ಮನ ಏದುರು ಹೆಚ್ಚಾಗಿ ಬೀಳದೇನೆ ಎಲ್ಲೋ ಒಂದು ಸಂದೀಲಿ ಕೂಡುತ್ತಿದ್ದೆವು. ಒಂದೆರಡು ದಿನಗಳು ಕಳೆದಾದ ಮ್ಯಾಲೆ ಮನೆಯಲ್ಲಿ ಶಾಲೆಗೆ ಹೋಗಲು ಜೋರುಮಾಡಿದಾಗ ಪೆನ್ನು ಇಲ್ಲಾ, ಕಾಪಿ ಇಲ್ಲಾ, ಸರ್ ಹೊಡಿತಾರಾ, ನಾ ಹೋಗಲ್ಲ.... ಎಂದು ಅಳಲು ಶುರು ಮಾಡುವುದಂತೂ ಇದ್ದೇ ಇತ್ತು. "ಏ ಹೋಗಬ್ಯಾಡ ಬಿಡು, ಎಡ್ಮೂರು ದಿನದಾಗ ಇಸ್ಕೂಡ್ತೀನಿ, ಹೋಗಾಟಿ"

ಅಂತ ಅಪ್ಪ ಅಂದಾಗ ಆಳು ಮಾಯಾವಾಗೋದು. ಹೀಗೆ ಶಾಲೆಗೆ ಹೋಗುವ ಮುಹೂರ್ತ ಏನೋ ನೆಪ ಹೇಳಿ ಮುಂದೂಡುತಿದ್ದೆವು. ಒಂದು ವಾರ ಕಳೆದ್ರು ಶಾಲೆ ಕಡೆ ತಲೆ ಹಾಕದೆ ಇದ್ದಾಗ ನಮ್ಮ ಶಿಕ್ಷಕರ ಪಿತ್ತ ನೆತ್ತಿಗೆ ಏರಿ, ಕೈಯಲ್ಲಿ ಒಂದು ಕಟ್ಟಿಗೆ ಹಿಡಿದು ನಮ್ಮನ್ನು ಹುಡುಕುತ್ತಾ ಊರಲ್ಲಿ ಬರುವರು. ಅವರ ಬರುವಿಕೆ ನಿರೀಕ್ಷಿಸದೆ ಆಟದಲ್ಲಿ ನಿರತರಾದ ನಾವು ಅವರ ಕೈಯಲ್ಲಿ ಸಿಕ್ಕಿ ಕೊಂಡಾಗ, "ಸರ್ ನನಗ ಸಂಡಾಸ್ ಹತ್ಯಾದ್ರಿ, ಅದಕ ನಮ್ ಅಮ್ಮ ಸಾಲಿಗಿ ಹೊಬ್ಯಾಡ ಅಂದಾಳ್ರಿ, ಅದಕ ಬಂದಿಲ್ಲ" ಅಂದ್ರ, "ಮಗನಾ ಸಾಲಿಗಿ ಬರ್ಲಾಕ ಸಂಡಾಸ ಹತ್ಯಾದ, ಗೋಟಿ ಆಡ್ಲಾಕ ಹತ್ತಿಲೇನು?" ಅಂತ ಒಂದೆರಡು ಏಟು ಹಾಕಿ ಶಾಲೆಗೆ ಕರೆದುಕೊಂಡು ಹೋಗುವರು ನಮ್ಮ ಗುರುಗಳು.

ಹಳೇ ಪೆನ್ನು, ಕಾಪಿನೇ ಸುದ್ರಾಸಿಕೊಂಡು ಒಂದೆರಡು ದಿನಾ ಶಾಲೆಗೆ ಹೋಗುವುದರೊಳಗ ಅಪ್ಪ ಶಾಲೆಗೆ ಬಂದು ನನ್ನ ಮಗನಿಗಿ ಜರಾ ಸಂತಿಗಿ ಕರ್ಕೊಂಡು ಹೋಗ್ತೀನಿರಿ. ಅವನಿಗೆ ಬ್ಯಾಗು, ಪೆನ್ನು, ಕಾಪಿ, ಚಪ್ಪಲಿ ಇಸ್ಕೊಂಡ್ತೀನಿ ಅಂದಾಗ ನಮ್ ಸರ್ ಕಳಸವ್ರು. ಹೊಸ ಬ್ಯಾಗು, ಹೊಸ ಚಪ್ಲಿ, ವಿಷಯಕ್ಕೆ ಒಂದೊಂದು ಕಾಪಿ, ಕನ್ನಡ, ಇಂಗ್ಲೀಷ್ ಶುದ್ಧಬರಹ ಇವೆಲ್ಲಾ ಖರೀದಿಸಿ ಮನೆಗೆ ತಂದು ಅವುಗಳಿಗೆಲ್ಲ ಪುಟ್ಟಾ ಹಾಕಿ ಹೆಸರು ಬರ್ಸಿ ಮತ್ತೆ ಮುಖ ಸಪ್ಪಗೆ ಮಾಡಿಕೊಂಡು ಬೇರೆ ದಾರಿಗಳಿರದೆ, ಸಬೂಬುಗಳು ಹೇಳದೆ ಶಾಲೆಗೆ ಹೋರಡುತ್ತಿದ್ದೆವು.

ನಾಲ್ಕೈದು ದಿನಗಳಲ್ಲಿ ಎಲ್ಲಾ ಆಟಗಳು ಮರೆತು ಜಮಾಯಿಸಿಟ್ಟಿದ್ದ ಟೀಪಾ, ಪತ್ತಾ ಬಿಟ್ಟಾಕಿ, ಪಾಠ, ಪೆಟ್ಟು, ಪ್ರಶ್ನೆ, ಉತ್ತರದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದೆವು. ಆ ಸರ್ಕಾರಿ ಶಾಲೆಯಿಂದಲೇ, ಅಂದು ಎರಡೇಟು ಕೊಟ್ಟ ಶಿಕ್ಷಕರಿಂದಲೇ, ಅಪ್ಪ, ಅಣ್ಣ ಇಸ್ಕೊಟ್ಟ ಕಾಪಿ, ಪೆನ್ನಿನಿಂದ ಬರೆದು, ಇಂದು ಎರಡಕ್ಷರ ಬರೆಯುತ್ತಿರುವದು, ಎರಡಕ್ಷರ ಕಲಿಸುತ್ತಿರುವದು.

ಆದರೂ....... ಆ ಬೇಸಿಗೆ ರಜೆ ದಿನಗಳು, ಅಂದು ಆಡಿರುವ ಆಟಗಳು ನೆನಪಿನಲ್ಲಿವೆ. ನೆನಪಿನಲ್ಲಿರುತ್ತವೆ ಅಲ್ವಾ?

# ಮುಂದಿನ ಸಂಚಿಕೆಯಲ್ಲಿ............



ಅನುಭವ ಲೇಖನ, ಸುದ್ದಿ, ಕವನ, ವ್ಯಕ್ತಿ ಪರಿಚಯ, ನಗೆಯ ತೋಟ ಮತ್ತು ಚೆಂದದ ಚಿತ್ತಾರಗಳಿಂದ ಸಿಂಗರಿಸಿದ ಹೊಸ ಸಂಚಿಕೆ ನೀವು ನೋಡಿದಿರಿ. ಇದನ್ನು ಸಂಪೂರ್ಣವಾಗಿ ಓದಿ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ತಿಳಿಸಿ.

ಮುಂದಿನ ಸಂಚಿಕೆಯಲ್ಲಿ ಒಂದು ಸಣ್ಣ ಕತೆಯನ್ನೂ ತರಲಿದ್ದೇವೆ. ವಿವಧ ವಿಷಯದ ಮೇಲೆ ಮನ ತಟ್ಟುವ ಕತೆಗಳು ಬರಲಿ. ಉತ್ತಮ ಸಂದೇಶ ಸಾರುವ ಕತೆಗಳನ್ನು ಹಂಚಿಕೊಳ್ಳೋಣ.

ಇನ್ನೂ ಕೆಲವು ದಿನಗಳಲ್ಲಿ ಕಾರ್ಮೋಡಗಳು ಆಕಾಶವನ್ನಾವರಿಸಿ, ಮನ್ಸೂನ ಮಳೆಯನ್ನು ತರಲಿವೆ. ಈ ಮಳೆಗಾಲದ ಆರಂಭಿಕ ಮುಂದಿನ ಸಂಚಿಕೆಯ ವಿಷಯ, **"ಮುಂಗಾರು ಮಳೆ"**. ವರ್ಷದ ಮೊದಲ ಮಳೆ ಅನೇಕ ನೆನಪುಗಳ ವರ್ಷಾವಳಿ. ಸಾಲಿಗೆ ತೊಯ್ಯುತ್ತಾ ಗೆಳೆಯರೊಂದಿಗೆ ಹೋದಿದ್ದಾಗಲಿ, ಕಾಲೇಜಿನಲ್ಲಿ ತನ್ನ ಛತ್ರಿ ಚೆಲುವೆಗೆ ಕೊಟ್ಟ ಪ್ರಸಂಗವಾಗಲಿ, ರಸ್ತೆಯಲ್ಲಿ ಕೊಡೆ ತಿರುವಿದ ಪೇಚಾಗಲಿ, ಮದುವೆಯ ನಂತರದ ಮೊದಲ ಮಳೆಯಾಗಲಿ.... ಹೀಗೆ ಅನೇಕ ಮಧುರ ಕ್ಷಣಗಳನ್ನು ನೆನಪಿಸುವದು ಈ ಮಳೆ. ಈ ವಿಷಯದ ಮೇಲೆ ಲೇಖನ, ಕತೆ, ಕವನಗಳನ್ನು ಬರೆದು ಕಳಿಸಿರಿ.

ಕಂಪು ಪತ್ರಿಕೆ ಹೊಸ ಬರಹಗಾರರಿಗೆ ಅದರಲ್ಲೂ ಯುವ ಲೇಖಕ, ಕವಿಗಳ ಕೃತಿಗಳಿಗೆ ವೇದಿಕೆ ಕೊಡುವದು. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ಹರಿಯಲಿ. ಇನ್ನೊಂದು ತಿಂಗಳಲ್ಲಿ ಕಂಪು ಸಂಸ್ಥೆಯಾಗಿ ರೂಪಿಸಲಾಗುವದು. ಪತ್ರಿಕೆ, ವಿಡಿಯೋ ತಯಾರಿಕೆಯಲ್ಲಿ ಸಹಾಯ ಮಾಡಿ, ಜವಾಬ್ದಾರಿ ವಹಿಸಿಕೊಳ್ಳಲು ಕರೆ ನೀಡುತ್ತಿದ್ದೇವೆ.

"ಕಂಪು" ಎಲ್ಲ ಸಹೃದಯ ಕನ್ನಡಿಗರ ಸ್ವಾಮ್ಯತ್ವದ ಪತ್ರಿಕೆ. ಬನ್ನಿ ಇದನ್ನು ಇನ್ನೂ ಉಚ್ಚ ಮಟ್ಟಕ್ಕೆ ಒಯ್ಯೋಣ.

ಕಂಪು

# ತಿಂಗಳ ಛಾಯಾ ಫಲಕ

## ಬಸವ ಜಯಂತಿ ಕಾರ್ಯಕ್ರಮದ ಕೆಲ ನೋಟಗಳು










........ಮುಂಬರುವ ಕಾರ್ಯಕ್ರಮ.......

